**ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ**

**ಕಾವೇರಿ ಬಡಾವಣೆ, ನಿ.ಸಂ.05, ಬ್ಲಾಕ್ ನಂ.01, ಕುಶಾಲನಗರ – 571234**

**Email Id: kushalnagaradtp@hotmail.com ದೂರವಾಣಿ ಸಂ: 08276–274040**

ಸಂಖ್ಯೆ:ಕುಯೋಪ್ರಾ/ಪ್ರಾ.ಸಭೆ/46/2021–22 ದಿನಾಂಕ:

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 24–12–2021 ರ ಶುಕ್ರವಾರದಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ 46ನೇ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದವರು :–**

1) ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2) ಸದಸ್ಯ ಕಾರ್ಯದರ್ಶಿ
3) ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
4) ಶ್ರೀ ಪಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
5) ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
6) ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಕುಶಾಲನಗರ
7) ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

**ಗೈರುಹಾಜರಾದವರು :–**

1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಮುಳ್ಳುಸೋಗೆ ಗ್ರಾಮ ಪಂಚಾಯಿತಿ
2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಕೂಡುಮಂಗಳೂರು ಗ್ರಾಮ ಪಂಚಾಯಿತಿ
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ

**ವಿಷಯ ಸಂಖ್ಯೆ:– 1):**– ದಿನಾಂಕ: 18–09–2021 ರಂದು ನಡೆದ 45ನೇ ಯೋಜನಾ ಪ್ರಾಧಿಕಾರದ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸಿರುವ ಬಗ್ಗೆ.

**ಟಿಪ್ಪಣಿ :** ದಿನಾಂಕ: 18–09–2021 ರಂದು ನಡೆದ 45ನೇ ಪ್ರಾಧಿಕಾರದ ಸಭೆಯ ನಡವಳಿಗಳನ್ನು ಓದಿ ಒಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:–** :– ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ:– 2):**– ಪ್ರಾಧಿಕಾರದ ಖಾತೆಗೆ ಸೆಪ್ಟೆಂಬರ್ 2021, ಅಕ್ಟೋಬರ್ 2021 ಮತ್ತು ನವೆಂಬರ್ 2021 ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರದ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

**ಟಿಪ್ಪಣಿ :** ಸೆಪ್ಟೆಂಬರ್ 2021, ಅಕ್ಟೋಬರ್ 2021 ಮತ್ತು ನವೆಂಬರ್ 2021 ಮಾಹೆಯ ಜಮಾ ಮತ್ತು ಖರ್ಚುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದ್ದು, ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ

**ನಿರ್ಣಯ:–** ಸೆಪ್ಟೆಂಬರ್ 2021, ಅಕ್ಟೋಬರ್ 2021 ಮತ್ತು ನವೆಂಬರ್ 2021 ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ: 03** – ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಾವೇರಿ ನದಿಯ ಅಂಚಿನಲ್ಲಿ ಅಭಿವೃದ್ಧಿಗಳನ್ನು ನಿಯಂತ್ರಿಸಲು ಬಫರ್ ಅನ್ನು ಮಹಾಯೋಜನೆ (ಅಂತಿಮ) ನಕ್ಷೆಯಲ್ಲಿ ಅಳವಡಿಸುವ ಬಗ್ಗೆ.

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಸರ್ಕಾರವು ದಿನಾಂಕ: 03–12–2014 ರಲ್ಲಿ ತಾತ್ಕಾಲಿಕ ಮಹಾಯೋಜನೆಯನ್ನು ಅನುಮೋದಿಸಿದ್ದು, ಸದರಿ ನಕ್ಷೆಯಲ್ಲಿ ನದಿಯ ಅಂಚಿನಿಂದ ಅಭಿವೃದ್ಧಿಯನ್ನು ನಿಯಂತ್ರಿಸುವ ಉದ್ದೇಶದಿಂದ 30 ಮೀಟರ್ ಅಂತರಕ್ಕೆ Park and open space (ಬಫರ್) ಕಾಯ್ದಿರಿಸಲಾಗಿದೆ. 2018 ಮತ್ತು 2019ನೇ ಇಸವಿಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕುಶಾಲನಗರ ಯೋಜನಾ ಪ್ರಾಧಿಕಾರದ ದಕ್ಷಿಣ ಹಾಗೂ ಪೂರ್ವ ಗಡಿಯ ಕಾವೇರಿ ನದಿಗೆ ಹೊಂದಿಕೊಂಡಂತೆ ಇರುವ ನದಿ ಪ್ರದೇಶಗಳು ಸಂಪೂರ್ಣ ಜಲಾವೃತಗೊಂಡು ಭಾರಿ ವಿಕೋಪ ಸೃಷ್ಟಿಯಾಗಿದ್ದು, ಸದರಿ ಜಲಾವೃತ ಪ್ರದೇಶವು ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿರುವ 30 ಮೀಟರ್ ಅಂತರದ ಬಫರ್ ಪ್ರದೇಶವನ್ನು ಮೀರಿರುವುದು ಕಂಡುಬಂದಿದ್ದು, ಈ ಬಗ್ಗೆ ದಿನಾಂಕ: 07–09–2019 ರಂದು ನಡೆದ ಯೋಜನಾ ಪ್ರಾಧಿಕಾರದ ವಿಷಯ ಸಂಖ್ಯೆ (19) ರಲ್ಲಿ ಚರ್ಚಿಸಲಾಗಿದ್ದು, ಕಾವೇರಿ ನದಿಯ ಪ್ರವಾಹದಿಂದ ಹಲವು ವಸತಿ ಬಡಾವಣೆ, ಜಮೀನುಗಳು, ಕಟ್ಟಡಗಳು ನೀರಿನಲ್ಲಿ ಮುಳುಗಡೆಯಾಗಿದ್ದು, ಮುಂದಿನ ದಿನಗಳಲ್ಲಿ ಈ ರೀತಿ ಆಸ್ತಿಪಾಸ್ತಿ ನಷ್ಟ ಆಗುವುದನ್ನು ತಪ್ಪಿಸಲು ಮುಳುಗಡೆ ಪ್ರದೇಶಕ್ಕೆ ಸಂಬಂಧಪಟ್ಟ ಇಲಾಖೆಯ ಸಹಯೋಗದೊಂದಿಗೆ ನಕ್ಷೆ ಸಿದ್ಧಪಡಿಸಿ ಸದರಿ ನಕ್ಷೆಯನ್ನು ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಲು ಹಾಗೂ ಮುಳುಗಡೆ ಪ್ರದೇಶದಲ್ಲಿ ಅಭಿವೃದ್ಧಿ ನಿಯಂತ್ರಿಸಲು ವಲಯ ನಿಯಮಾವಳಿಯಲ್ಲಿ ಸೂಕ್ತವಾದ ಅವಕಾಶ ಮಾಡಿಕೊಳ್ಳಲು ನಿರ್ಣಯಿಸಲಾಗಿರುತ್ತದೆ ಹಾಗೂ ಮಹಾಯೋಜನೆ ನಕ್ಷೆಯನ್ನು ದಿನಾಂಕ: 24–06–2021 ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಪರಿಶೀಲನೆಗೆ ಒಳಪಡಿಸಿದ ಸಂದರ್ಭದಲ್ಲಿ Flooding map ಅನ್ನು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಪಡೆಯುವಂತೆ ಸೂಚಿಸಿರುವುದರ ಮೇರೆಗೆ ದಿನಾಂಕ: 02–07–2021 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆ ವಿಷಯ ಸಂಖ್ಯೆ 14(ಆ) ರಲ್ಲಿ ಚರ್ಚಿಸಿ ಜಲಾವೃತಗೊಳ್ಳುತ್ತಿರುವ ಪ್ರದೇಶ ನಕ್ಷೆಯನ್ನು ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರ ಸಹಯೋಗದೊಂದಿಗೆ ಪಡೆದು ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿಕೊಳ್ಳುವಂತೆ ನಿರ್ಣಯಿಸಲಾಗಿದ್ದು, ಆ ಪ್ರಕಾರ ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮಪಂಚಾಯಿತಿ ಸಹಯೋಗದೊಂದಿಗೆ ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರು ಕ್ಷೇತ್ರ ಬೇಟಿ ಮಾಡಿ GPS ತಂತ್ರಾಂಶದೊಂದಿಗೆ ಜಲಾವೃತಗೊಂಡಿರುವ ಪ್ರದೇಶದ ನಕ್ಷೆಯನ್ನು ಗುರುತಿಸಿ ನಕ್ಷೆ ಸಿದ್ಧಪಡಿಸಿ ನೀಡಿದ್ದು, ಸದರಿ ನಕ್ಷೆಯನ್ನು ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಲಾಗಿ ಈ ಹಿಂದೆ ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿರುವ 30 ಮೀಟರ್ ಬಫರ್ ಪ್ರದೇಶಕ್ಕಿಂತ ಹೆಚ್ಚು ಪ್ರದೇಶಗಳು ಜಲಾವೃತಗೊಂಡಿರುವುದು ಕಂಡುಬಂದಿದ್ದು, ಸಿದ್ಧಪಡಿಸಲಾದ ಮಹಾಯೋಜನೆ ನಕ್ಷೆಯನ್ನು ದಿನಾಂಕ: 26–11–2021 ರಂದು ಕೇಂದ್ರ ಕಛೇರಿಯ ಪರಿಶೀಲನೆಗೆ ಒಳಡಿಸಲಾಗಿ ಮುಂದಿನ ದಿನಗಳಲ್ಲಿ ನದಿ ನೀರಿನಿಂದ ಕಟ್ಟಡ, ಜಮೀನು, ಬಡಾವಣೆ ಇತ್ಯಾದಿಗಳು ನೀರಿನಲ್ಲಿ ಮುಳುಗಡೆಯಾಗಿ ಆಸ್ತಿಪಾಸ್ತಿ ನಷ್ಟ ಆಗುವುದನ್ನು ತಪ್ಪಿಸಲು ಹಾಗೂ ಯೋಜನಾ ದೃಷ್ಟಿಯಿಂದ ಬೆಳವಣಿಗೆ ಇಲ್ಲದೆ ಇರುವ ಕಡೆಗಳಲ್ಲಿ ನದಿಯ ಅಂಚಿನಿಂದ ಕನಿಷ್ಟ 100 ಮೀಟರ್ ಅಂತರಕ್ಕೆ ಬಫರ್ ಅಳವಡಿಸಿ ಅಭಿವೃದ್ಧಿಯನ್ನು ನಿಯಂತ್ರಿಸುವುದು ಸೂಕ್ತ ಹಾಗೂ ಉಳಿದ ಜಲಾವೃತ ಪ್ರದೇಶಗಳಲ್ಲಿ ವಿಪತ್ತು ತಡೆಯುವ ಉದ್ದೇಶದಿಂದ ಕಟ್ಟಡಗಳಿಗೆ ಸೂಕ್ತ ನಿಯಮವನ್ನು ವಲಯ ನಿಯಮಾವಳಿಯಲ್ಲಿ ಅಳವಡಿಸಿಕೊಳ್ಳುವಂತೆ ಸೂಚಿಸಿರುತ್ತಾರೆ. ವಿಷಯವನ್ನು ಸಭೆಗೆ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರು ನೀಡಿರುವ ಜಲಾವೃತ ನಕ್ಷೆಯನ್ನು ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿ ಪರಿಶೀಲಿಸಲಾಗಿ, ತಾತ್ಕಾಲಿಕ ಮಹಾಯೋಜನೆಯಲ್ಲಿ ನದಿ ಅಂಚಿನಿಂದ ಅಳವಡಿಸಿರುವ 30 ಮೀಟರ್ ಬಫರ್ ಪ್ರದೇಶವನ್ನು ಮೀರಿ ಹೆಚ್ಚಿನ ಪ್ರದೇಶಗಳು ಜಲಾವೃತಗೊಂಡಿರುವುದರಿಂದ ಮುಂದಿನ ದಿನಗಳಲ್ಲಿ ಇಂತಹ ವಿಕೋಪಗಳಿಂದ ಉಂಟಾಗಬಹುದಾದ ನಷ್ಟವನ್ನು ತಡೆಗಟ್ಟಲು ಹಾಗೂ ಜನರ ಸುರಕ್ಷತಾ ದೃಷ್ಟಿ ಹಾಗೂ ಯೋಜನಾ ದೃಷ್ಟಿಯಿಂದ ನದಿಯ ಅಂಚಿನಿಂದ ಪ್ರಸ್ತುತ ಅಭಿವೃದ್ಧಿಗೊಳ್ಳದೇ ಇರುವ ಪ್ರದೇಶಗಳಿಗೆ ಕನಿಷ್ಟ 100 ಮೀಟರ್ ಅಂತರಕ್ಕೆ ಮಹಾಯೋಜನೆ (ಅಂತಿಮ) ನಕ್ಷೆಯಲ್ಲಿ ಬಫರ್ ಅಳವಡಿಸಿ ಅಭಿವೃದ್ಧಿಯನ್ನು ನಿಯಂತ್ರಿಸುವುದು ಸೂಕ್ತ ಹಾಗೂ ನಕ್ಷೆಯಲ್ಲಿ ಗುರುತಿಸಿರುವ ಜಲಾವೃತಗೊಂಡಿರುವ (100 ಮೀಟರ್ ಬಫರ್ ನಂತರದ) ಪ್ರದೇಶಗಳಲ್ಲಿ ನಿರ್ಮಿಸಲಾಗುವ ಕಟ್ಟಡಕ್ಕೆ

ಸಂಬಂಧಿಸಿದಂತೆ ನೆಲ ಅಂತಸ್ತುಗಳಲ್ಲಿ ವಸತಿ ಉದ್ದೇಶಕ್ಕೆ ಅನುಮತಿಸದೇ ಖಾಲಿ ಬಿಟ್ಟು Stilt Floor ರಂತೆ (Stilt Floor ಅನ್ನು ಎತ್ತರದ ಮಿತಿಗೆ ಒಳಡಿಸದೆ) ನಂತರದಲ್ಲಿ ಮೊದಲನೆ ಮತ್ತು ಎರಡನೇ ಅಂತಸ್ತನ್ನು ಮಾತ್ರ ನಿರ್ಮಿಸಲು ಅನುಮತಿಸಲು ಹಾಗೂ ಕಟ್ಟಡಗಳಲ್ಲಿ ತಳಮಹಡಿ (Basement floor) ಅಳವಡಿಸಲು ಅವಕಾಶ ನೀಡದೇ ಇರಲು ಹಾಗೂ ವಸತಿಯೇತರ ಉದ್ದೇಶಿತ ಕಟ್ಟಡದಲ್ಲಿ ನೆಲ ಅಂತಸ್ತು ಅನ್ನು ಉಪಯೋಗಿಸಿಕೊಂಡು ನಗರ ಪ್ರದೇಶಗಳಲ್ಲಿ ಕನಿಷ್ಟ ಡಬಲ್ ಸ್ಟೋರಿ ಕಟ್ಟಡ ನಿರ್ಮಿಸುವಂತೆ ನಿಯಮಾವಳಿಯನ್ನು National Disaster Management Guidelines Management of Floods 2008 ಮತ್ತು URDPFI 2015 Guidelines ನಲ್ಲಿ ನೀಡಿರುವ ಮಾರ್ಗಸೂಚಿಯಂತೆ ಯೋಜನಾ ದೃಷ್ಟಿಯಿಂದ ವಲಯ ನಿಯಮಾವಳಿಯಲ್ಲಿ ಅಳವಡಿಸಿಕೊಳ್ಳುವುದು ಸೂಕ್ತವಾಗಿದ್ದು ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಹಾಗೂ ಬಹಳ ವಿಸ್ತೃತವಾಗಿ ಚರ್ಚೆಯಾಯಿತು, ಹಾಗೂ 2018 ಮತ್ತು 2019 ನೇ ಇಸವಿಯಲ್ಲಿ ನದಿಯ ಅಚ್ಚುಕಟ್ಟು ಪ್ರದೇಶಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ 3–4 ದಿನಗಳಲ್ಲಿ ಸುರಿದಿದ್ದರಿಂದ ನದಿಯ ನೀರು ಹಿನ್ನುಗ್ಗಿ ಪ್ರವಾಹದಂತೆ ಅಕ್ಕಪಕ್ಕದ ಜಮೀನುಗಳಿಗೆ ನುಗ್ಗಿರುವುದಾಗಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಹಾಗೂ ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಕಾವೇರಿ ನೀರಿನ ಸಮರ್ಪಕ ಹರಿಯುವಿಕೆಗೆ ಸಂಬಂಧಿಸಿದಂತೆ ನದಿಯ ಹೂಳು, ನದಿಯ ದಂಡೆಯಲ್ಲಿರುವ ಗಿಡಗಂಟಿಗಳನ್ನು ಸಂಬಂಧಪಟ್ಟ ಇಲಾಖೆಯವರು ಕಾಲಕಾಲಕ್ಕೆ ಸೂಕ್ತ ರೀತಿಯಲ್ಲಿ ತೆರವುಗೊಳಿಸದೇ ಇರುವುದರಿಂದ ಮತ್ತು ಕುಶಾಲನಗರಕ್ಕೆ ಸಮೀಪ ಇರುವ ಹಾರಂಗಿ ಅಣೆಕಟ್ಟೆಯಲ್ಲಿ ನೀರಿನ ಒಳಹರಿವು ಹೆಚ್ಚಾದಾಗ ಅಚ್ಚುಕಟ್ಟು ಪ್ರದೇಶದ ಮಳೆಗೆ ಅನುಗುಣವಾಗಿ ಸಮರ್ಪಕವಾಗಿ ನೀರು ನಿರ್ವಹಣೆಯನ್ನು ಮಾಡದೇ ಒಮ್ಮಿಂದೊಮ್ಮೆಲೆ ನದಿಗೆ ಅಣೆಕಟ್ಟಿನಿಂದ ಹೆಚ್ಚು ನೀರನ್ನು ಹರಿಯ ಬಿಟ್ಟಿದ್ದರಿಂದ ಪ್ರವಾಹ ಪರಿಸ್ಥಿತಿ ಎದುರಾಗಿದ್ದು ಅದಕ್ಕೂ ಪೂರ್ವದಲ್ಲಿ ಕಳೆದ ಸುಮಾರು ಐವತ್ತು ವರ್ಷಗಳಲ್ಲಿ ಕುಶಾಲನಗರ ವ್ಯಾಪ್ತಿಯಲ್ಲಿ ಪ್ರವಾಹ ಉಂಟಾಗಿರುವುದಿಲ್ಲ ಎಂಬುದಾಗಿ ಅಧ್ಯಕ್ಷರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಬಗ್ಗೆ ಸದಸ್ಯರುಗಳು ದನಿಗೂಡಿಸಿದರು. ಈಗಾಗಲೇ ನದಿ ಪಾತ್ರದಲ್ಲಿ ಜನರು ಎಚ್ಚೆತ್ತುಗೊಂಡಿದ್ದು ಅಭಿವೃದ್ಧಿಗಳು ಕುಂಠಿತವಾಗಿರುವುದಾಗಿ ಸದಸ್ಯರು ಸಭೆಗೆ ತಿಳಿಸಿದರು. ಜಿಲ್ಲಾ ವಿಪತ್ತು ನಿರ್ವಹಣ ಪರಿಣಿತರು ಕ್ಷೇತ್ರ ಭೇಟಿ ಮಾಡಿ ಜಿಪಿಎಸ್ ಮುಖಾಂತರ ಜಲಾವೃತಗೊಂಡಿದ್ದ ಪ್ರದೇಶದ ಸರ್ವೆ ನಡೆಸಿ ನೀಡಿದ್ದ ನಕ್ಷೆಯನ್ನು ಮಹಾಯೋಜನೆಯಲ್ಲಿ ಅಳವಡಿಸಿರುವುದನ್ನು ಸಭೆಯು ಪರಿಶೀಲಿಸಿತು. ಯೋಜನಾ ಪ್ರಾಧಿಕಾರದ ವ್ಯಾಪ್ತಿಯ ಎರಡು ಕಡೆಗಳಲ್ಲಿ ನದಿ ಹರಿಯುತಿದ್ದು ನದಿ ಅಂಚಿನಿಂದ 100 ಮೀಟರ್ ಬಫರ್ ಅಳವಡಿಸಿದಲ್ಲಿ ಈಗಾಗಲೇ ಸದರಿ ವ್ಯಾಪ್ತಿಯಲ್ಲಿ ನಿವೇಶನ ಹೊಂದಿರುವವರು ತಮ್ಮ ಜಮೀನ್ನು ಅಭಿವೃದ್ಧಿಪಡಿಸಲಾಗದ ಸ್ಥಿತಿ ಬರುತ್ತದೆ ಎಂಬುದಾಗಿ ಸದಸ್ಯರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈಗಾಗಲೇ ಸಾಕಷ್ಟು ಬೆಳವಣಿಗೆಗಳು ಬಂದಿದ್ದು ಕೆಲವೇ ಕೆಲವು ಪ್ರದೇಶಗಳು ಅಭಿವೃದ್ಧಿ ಬಾಕಿ ಇರುತ್ತದೆ. ಹಾಗಾಗಿ ಈಗ ಬಫರ್ ಅಳಡಿಸಿದ್ದಲ್ಲಿ ಈಗಾಗಲೇ ನಿವೇಶನ ಕೊಂಡವರು ಕಟ್ಟಡ ನಿರ್ಮಿಸಲು ಸಾಧ್ಯವಾಗುವುದಿಲ್ಲ. ಇದರಿಂದ ನಿವೇಶನ ಖರೀದಿಮಾಡಿರುವವರು ಸಮಸ್ಯೆ ಅನುಭವಿಸಬೇಕಾಗುತ್ತದೆ ಮತ್ತು ಒಂದು ಭಾಗದ ಅಭಿವೃದ್ಧಿ ಸಂಪೂರ್ಣ ಸ್ಥಗಿತಗೊಳಿಸಿದಂತಾಗುತ್ತದೆ ಎಂಬುದಾಗಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಸದಸ್ಯ ಕಾರ್ಯದರ್ಶಿಯವರು ಮಾತನಾಡಿ ಹಾಲಿ ಬೆಳವಣಿಗೆ ಹೊಂದಿರುವ ಪ್ರದೇಶವನ್ನು ಹೊರತುಪಡಿಸಿ ಪ್ರಸ್ತುತ ಖಾಲಿ ಇರುವ ಪ್ರದೇಶದಲ್ಲಿ ಕನಿಷ್ಟ 100 ಮೀಟರ್ ಬಫರ್ ಅಳವಡಿಸಿದಲ್ಲಿ ಮುಂದಾಗುವ ಆಸ್ತಿಪಾಸ್ತಿ ನಷ್ಟವನ್ನು ತಪ್ಪಿಸಬಹುದಾಗಿದೆ ಎಂಬುದಾಗಿ ಸಭೆಗೆ ತಿಳಿಸಿದರು. ಈಗಾಗಲೇ ಕಾವೇರಿ ನದಿಯ ಅಂಚಿಗೆ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆ ಇರುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು. ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು ಹೊಸದಾಗಿ ಬಫರ್ ಅಳವಡಿಸದೇ ಪ್ರಸ್ತುತ ತಾತ್ಕಾಲಿಕ ಅನುಮೋದಿತ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿರುವ ಬಫರ್ ಹಾಗೂ ಪ್ರಸ್ತಾವಿತ ರಸ್ತೆಯನ್ನು ಯಥಾಸ್ಥಿತಿ ಕಾಯ್ದಿರಿಸಿಕೊಳ್ಳಲು ಹಾಗೂ ಜಲಾವೃತ ಪ್ರದೇಶಗಳಲ್ಲಿ ಕಟ್ಟಡ ನಿರ್ಮಿಸಲು ಅನುಮತಿಸಲು ಸೂಕ್ತ ನಿಯಮಗಳನ್ನು ವಲಯ ನಿಯಮಾವಳಿಯಲ್ಲಿ ಅಳವಡಿಸಿಕೊಂಡು ಮಹಾಯೋಜನೆ ಅಂತಿಮ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು ಸೂಕ್ತ ಎಂಬುದಾಗಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ ನಿರ್ಣಯಿಸಿತು.

**<u>ವಿಷಯ ಸಂಖ್ಯೆ: 04</u>** – ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಸಿದ್ಧಪಡಿಸುತ್ತಿರುವ ಮಹಾಯೋಜನೆಯ ಕಾರ್ಟೋಗ್ರಾಫ್ Error/Mistake ಗಳನ್ನು ಮಹಾಯೋಜನೆ (ಅಂತಿಮ) ನಕ್ಷೆಯಲ್ಲಿ ಸರಿಪಡಿಸಿ ಅಳವಡಿಸಿಕೊಳ್ಳುವ ಬಗ್ಗೆ.

**<u>ಟಿಪ್ಪಣಿ:</u>** ವಿಷಯಕ್ಕೆ ಸಂಬಂಧಿಸಿದಂತೆ, ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಸರ್ಕಾರದ ಆದೇಶ ಪತ್ರ ಸಂಖ್ಯೆ ನಅಇ 469 ಮೈಅಪ್ರಾ 2014, ದಿನಾಂಕ: 03–12–2014 ರಲ್ಲಿ ತಾತ್ಕಾಲಿಕ ಮಹಾಯೋಜನೆಯು ಅನುಮೋದನೆಗೊಂಡಿದ್ದು, ಮಹಾಯೋಜನೆ ಅಂತಿಮ ಸಿದ್ಧಪಡಿಸುತ್ತಿರುವ ಕೆಲಸವು ಅಂತಿಮ ಹಂತದಲ್ಲಿರುತ್ತದೆ. ಅನುಮೋದಿತ ತಾತ್ಕಾಲಿಕ ಮಹಾಯೋಜನೆಯಲ್ಲಿ ಕಾರ್ಟೋಗ್ರಾಫ್ Error/Mistake ಗಳು ಈ ಕೆಳಕಂಡಂತೆ ಹಾಗೂ ವಲಯ ನಿಯಮಾವಳಿಗಳಲ್ಲಿ ಕೆಲವು ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ಬಿಟ್ಟು ಹೋಗಿರುವುದು ಕಂಡುಬಂದಿದೆ.

| ಕ್ರ. ಸಂ | ಗ್ರಾಮ | ಸರ್ವೆ ನಂಬರ್ | ತಾತ್ಕಾಲಿಕ ಮಹಾಯೋಜನೆಯಲ್ಲಿ ಭೂ–ಉಪಯೋಗ | ಪರಿಷ್ಕರಣೆಗೆ ಕಾರಣ | ಷರಾ |
|---|---|---|---|---|---|
| 1 | ಕೂಡ್ಲೂರು | 18/2 | ಕೆರೆ | ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಕೂಡ್ಲೂರು ಗ್ರಾಮ ಸ.ನಂ 19/1 ಮತ್ತು ಸ.ನಂ. 18/2 ರಲ್ಲಿ ಕೆರೆ ನಮೂದಿಸಲಾಗಿದೆ | ಗ್ರಾಮ ನಕ್ಷೆಯಲ್ಲಿ ಕೆರೆ ಕೂಡ್ಲೂರು ಗ್ರಾಮ ಸ.ನಂ. 18/1 ರ ದಕ್ಷಿಣ ಗಡಿಗೆ ಹೊಂದಿಕೊಂಡಂತೆ ಸ.ನಂ. 18/2 ರಲ್ಲಿ ಇರುವುದರಿಂದ ಕೆರೆಯನ್ನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಸರಿಪಡಿಸಿ ಅಳವಡಿಸಬಹುದಾಗಿದೆ. |
| 2 | ಮುಳ್ಳುಸೋಗೆ | 27 | ಕೆರೆ | ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಕೆರೆಯನ್ನು ಗುರುತಿಸಿರುವ ಪ್ರದೇಶದಲ್ಲಿ ವ್ಯತ್ಯಾಸ ಕಂಡುಬಂದಿದೆ | ಗ್ರಾಮ ನಕ್ಷೆಯಂತೆ ಸ.ನಂ. 27 ರಲ್ಲಿನ ಕೆರೆಯು ಸ.ನಂ. 28/2 ರ ಈಶಾನ್ಯ ಮೂಲೆಯ ಗಡಿಗೆ ಲಗತ್ತಾಗಿರುವುದರಿಂದ ಕೆರೆಯನ್ನು ಸರಿಪಡಿಸಿ ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಬಹುದಾಗಿದೆ. |
| 3 | ಗುಮ್ಮನಕೊಲ್ಲಿ | 15 | ಕೆರೆ | ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಕೆ–ರೆಯ ಭಾಗಶ ಭಾಗವು ಕೂಡ್ಲೂರು ಗ್ರಾಮ ಸ.ನಂ. 68/1 ರಲ್ಲಿ ನಮೂದಿಸಿರುವುದು ಕಂಡುಬಂದಿದೆ. | ಗ್ರಾಮ ನಕ್ಷೆಯಂತೆ ಗುಮ್ಮನಕೊಲ್ಲಿ ಗ್ರಾಮದ ಒಳಗೆ ಸ.ನಂ. 15 ರಲ್ಲಿ ಮಾತ್ರ ಕೆರೆ ಇರುವುದರಿಂದ ಕೆರೆಯನ್ನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಸರಿಪಡಿಸಿ ಅಳವಡಿಸಬಹುದಾಗಿದೆ. |
| 4 | ಬೈಚನಹಳ್ಳಿ | 129 | ಟ್ರಾನ್ಸ್‌ಪೋರ್ಟೇಷನ್ | ಜಮೀನು ಬಿ.ಎಸ್.ಎನ್.ಎಲ್ ಕಛೇರಿಗೆ ಸಂಬಂಧಿಸಿದೆ | ಜಮೀನು ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿದ್ದು ಬಿ.ಎಸ್.ಎನ್.ಎಲ್. ಸಂಸ್ಥೆಗೆ ಸಂಬಂಧಿಸಿರುವುದರಿಂದ ಭೂ–ಉಪಯೋಗವನ್ನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಸಾರ್ವಜನಿಕ ಹಾಗೂ ಅರೆಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಬಹುದಾಗಿದೆ. |
| 5 | ಮಾದಾಪಟ್ಟಣ | 53 | ರಸ್ತೆ | ಹಾಲಿ ರಸ್ತೆ ಪಂಕ್ತೀಕರಣವನ್ನು ಕೆರೆಯ ಮೇಲೆ ನಮೂದಿಸಲಾಗಿದೆ. | ಹಾಲಿ ರಸ್ತೆಯು ಕೆರೆಯ ಪೂರ್ವ ಗಡಿಯಲ್ಲಿ ಹಾದು ಹೋಗಿರುವುದರಿಂದ ರಸ್ತೆ ಪಂಕ್ತೀಕರಣವನ್ನು ಸ.ನಂ. 53 ರಲ್ಲಿ ಕೆರೆಯ ಗಡಿಗೆ ಹೊಂದಿಕೊಂಡಂತೆ ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಸರಿಪಡಿಸಿ ಅಳವಡಿಸಿಕೊಳ್ಳಬಹುದಾಗಿದೆ. |

**ಪು.ತಿ.ನೋ**

| | | | | | |
|---|---|---|---|---|---|
| 6 | ಮಾದಾಪಟ್ಟಣ | 57/6 | ವಸತಿ, ವಾಣಿಜ್ಯ, ಉದ್ಯಾನವನ ಹಾಗೂ ಬಯಲು ಜಾಗ ಮತ್ತು ಕೃಷಿ | ಗ್ರಾಮ ನಕ್ಷೆಯಂತೆ Drain | ಗ್ರಾಮ ನಕ್ಷೆಯಂತೆ Drain ಇರುವುದರಿಂದ ಅಂತಿಮ ಮಹಾಯೋಜನೆ ನಕ್ಷೆಯಲ್ಲಿ Drain ಅನ್ನು ನಮೂದಿಸಬಹುದಾಗಿದೆ. |
| 7 | ಬೈಚನಹಳ್ಳಿ | 1/1, 2/2, 2/1, 11/1, 2/3, 7, 12/2, 16/1, 16/2, 15/1 | ರಸ್ತೆ | ಸದರಿ ಸರ್ವೆ ನಂಬರ್‌ಗಳಲ್ಲಿ ಪ್ರಸ್ತಾಪಿತ ರಸ್ತೆ ಹಾಗೂ ಹಾಲಿ ರಸ್ತೆಯ ಪಂಕ್ತೀಕರಣದಲ್ಲಿ ವ್ಯತ್ಯಾಸ ಇರುವುದರಿಂದ ಹಾಗೂ ಬಡಾವಣೆಗಳು ಅನುಮೋದನೆಗೊಂಡಿರುವುದರಿಂದ. | ಸ.ನಂ. 7, 2/3, 3, 2/1, ರಲ್ಲಿ ಬಡಾವಣೆಗೆ ಹಾಲಿ ರಸ್ತೆಯನ್ನು 12.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಿ ಪ್ರಾಧಿಕಾರದಿಂದ ಈ ಹಿಂದೆ ಅನುಮೋದಿಸಿದ್ದು ಸ್ಥಳದಲ್ಲಿ ಈಗಾಗಲೇ ಬಡಾವಣೆ ಅಭಿವೃದ್ಧಿಗೊಂಡು ಕಟ್ಟಡಗಳು ಬಂದಿರುವುದರಿಂದ ಹಾಲಿ ರಸ್ತೆಯನ್ನು 18.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲು ಸ್ಥಳದಲ್ಲಿ ಅವಕಾಶ ಇರುವುದಿಲ್ಲ ಹಾಗೂ ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಇರುವ ರಸ್ತೆ ಪಂಕ್ತೀಕರಣದಲ್ಲಿ ವ್ಯತ್ಯಾಸ ಇರುವುದರಿಂದ ರಸ್ತೆ , ಅಗಲವನ್ನು ಕಡಿಮೆಗೊಳಿಸಿ, ರಸ್ತೆ ಪಂಕ್ತೀಕರಣವನ್ನು LPA Boundary ವರೆಗೂ ಸರಿಪಡಿಸಿ ಅಂತಿಮ ಮಹಾಯೋಜನೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. |
| 8 | ಏಕ–ನಿವೇಶನ ವಸತಿಯೇತರ ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ಗುರುತಿಸಿರುವ ವಾಹನ ನಿಲುಗಡೆ, ರಸ್ತೆ ಹಾಗೂ ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಭಾಗವನ್ನು ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿರುವುದು ಕಂಡುಬಂದಿದ್ದು ಯೋಜನಾ ದೃಷ್ಟಿಯಲ್ಲಿ ಈ ರೀತಿ ಏಕ–ನಿವೇಶನ ವಸತಿಯೇತರ ವಿನ್ಯಾಸ ನಕ್ಷೆಯಲ್ಲಿ ಗುರುತಿಸಿರುವ ಪ್ರದೇಶವನ್ನು ಅಂತಿಮ ಮಹಾಯೋಜನೆ ನಕ್ಷೆಯಿಂದ ತೆಗೆದು ಹಾಕಿ ಆಯಾ ಪ್ರದೇಶದ ಉದ್ದೇಶಿತ ಭೂ–ಉಪಯೋಗವನ್ನು ಅಳವಡಿಸಿಕೊಳ್ಳಬೇಕಿದೆ ಹಾಗೂ ಅನುಮೋದಿತ ಬಡಾವಣೆಗಳಲ್ಲಿನ ಭೂ–ಉಪಯೋಗವನ್ನು ಅದೇ ಉದ್ದೇಶಕ್ಕೆ ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿಕೊಳ್ಳಬೇಕಿದೆ. | | | ಏಕ–ನಿವೇಶನ ವಾಣಿಜ್ಯ ವಿನ್ಯಾಸ ನಕ್ಷೆ ಅನುಮೋದನೆ ಸಂದರ್ಭ ವಿನ್ಯಾಸ ನಕ್ಷೆಯಲ್ಲಿ ತೋರಿಸಿರುವ ವಾಹನ ನಿಲುಗಡೆ, ಉದ್ಯಾನವನ, ಬಯಲುಜಾಗ, ರಸ್ತೆಯನ್ನು ಮಹಾಯೋಜನೆ ನಕ್ಷೆಯಲ್ಲಿ ನಮೂದಿಸಲು ಅವಕಾಶವಿಲ್ಲವಾದ್ದರಿಂದ ಯೋಜನಾ ದೃಷ್ಟಿಯಿಂದ ಅಂತಿಮ ಮಹಾಯೋಜನೆ ನಕ್ಷೆಯಿಂದ ತೆಗೆದು ಹಾಕಿ ಆಯಾ ಪ್ರದೇಶದ ಉದ್ದೇಶಿತ ಭೂ–ಉಪಯೋಗವನ್ನು ಹಾಗೂ ಅನುಮೋದಿತ ಬಡಾವಣೆಯ ಭೂ–ಉಪಯೋಗವನ್ನು ಅದೇ ಉದ್ದೇಶಕ್ಕೆ ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ |
| 9 | ತಾತ್ಕಾಲಿಕ ಮಹಾಯೋಜನೆ ಅನುಮೋದನೆ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ವ್ಯಾಪಿಯಲ್ಲಿ 13 ವಾರ್ಡ್‌ಗಳಿದ್ದು ಸದರಿ ವಾರ್ಡ್‌ಗಳನ್ನು ಇತ್ತೀಚೆಗೆ 16 ವಾರ್ಡ್‌ಗಳನ್ನಾಗಿ ಪುನರ್ ವಿಂಗಡಿಸಿ ವಾರ್ಡ್ ಸಂಖ್ಯೆಗಳನ್ನು ಬದಲಾಯಿಸಿಕೊಂಡಿರುವುದರಿಂದ ಬೈಚನಹಳ್ಳಿ ಮತ್ತು ಮಾದಾಪಟ್ಟಣ ಗ್ರಾಮ ಗಡಿಯನ್ನು ಸರಿಪಡಿಸಿ ತಾತ್ಕಾಲಿಕ ಮಹಾಯೋಜನೆಯಲ್ಲಿ ಪಟ್ಟಣ ಪಂಚಾಯಿತಿ ಗಡಿ ಒಳಗೆ ನಮೂದಿಸಿರುವ ಬೈಚನಹಳ್ಳಿ ಗ್ರಾಮ ಸ.ನಂ. 2/1, 2/3, 11/1, 8/2, 8/3, 8/4 ಗಳನ್ನು ಕೈಬಿಟ್ಟು ಮುಳ್ಳುಸೋಗೆ ಗ್ರಾಮದ ಸ.ನಂ. 37 ಅನ್ನು ಸಂಪೂರ್ಣ ಸೇರಿಸಿಕೊಂಡು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿಕೊಳ್ಳಬೇಕಿದೆ. | | | ಮಾನ್ಯ ಜಿಲ್ಲಾಧಿಕಾರಿಯವರ ಅಧಿಸೂಚನೆ ಪತ್ರ ಸಂ: ಚುನಾ/10(2)2016–17 ದಿನಾಂಕ: 09–05–2017 ಮತ್ತು ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ: ನಅಇ 57 ಎಂಎಲ್‌ಆರ್ 2018(4) ಬೆಂಗಳೂರು ದಿನಾಂಕ: 30–07–2018 ರನ್ವಯ ಪಟ್ಟಣ ಪಂಚಾಯಿತಿ ವಾರ್ಡ್ ಸಂಖ್ಯೆ 13 ರಿಂದ 16 ಕ್ಕೆ ಏರಿಸಿರುವುದರಿಂದ ಪಟ್ಟಣ ಪಂಚಾಯಿತಿ ಗಡಿ, ವಾರ್ಡ್ ಬೌಂಡರಿ ಹಾಗೂ ವಾರ್ಡ್ ಸಂಖ್ಯೆಗಳನ್ನು ಸರಿಪಡಿಸಿ ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. |

ಸದರಿ Error/Mistake ಗಳನ್ನು ಅಂತಿಮ ಮಹಾಯೋಜನೆ ನಕ್ಷೆ ಹಾಗೂ ವಲಯ ನಿಯಮಾವಳಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಲಾಗಿದೆ.

**<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u>** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರವು ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ತಾತ್ಕಾಲಿಕ ಮಹಾಯೋಜನೆಯನ್ನು ಅನುಮೋದಿಸಿದ್ದು, ಸದರಿ ಮಹಾಯೋಜನೆ (ಅಂತಿಮ) ಸಿದ್ಧಪಡಿಸುವ ಕೆಲಸವು ಅಂತಿಮ ಹಂತದಲ್ಲಿದ್ದು ಅನುಮೋದಿತ ತಾತ್ಕಾಲಿಕ ಮಹಾಯೋಜನೆ ನಕ್ಷೆಯನ್ನು ಗ್ರಾಮ ನಕ್ಷೆ ಮತ್ತು ಅನುಮೋದಿತ ವಿನ್ಯಾಸ ನಕ್ಷೆಗಳೊಂದಿಗೆ ಪರಿಶೀಲಿಸಲಾಗಿ ತಾತ್ಕಾಲಿಕ ಮಹಾಯೋಜನೆಯಲ್ಲಿ ಕಾರ್ಟೋಗ್ರಾಫ್ Error ಗಳು ಹಾಗೂ ವಲಯ ನಿಯಮಾವಳಿಯಲ್ಲಿ ನಿವೇಶನಗಳ ಒಂದುಗೂಡಿಸುವಿಕೆ/ವಿಭಜನೆಗಳಿಗೆ ನಿಯಾಮಗಳು ಹಾಗೂ Staircase width ಹಾಗೂ ಕೆಲವು ಇತರೆ ನಿಯಮಗಳನ್ನು ಅಳವಡಿಸಿಕೊಳ್ಳಲು ಬಿಟ್ಟುಹೋಗಿರುವುದು ಕಂಡುಬಂದಿದೆ ಹಾಗಾಗಿ ಈ ಹಂತದಲ್ಲಿ ಯೋಜನಾ ದೃಷ್ಟಿಯಿಂದ ಮಹಾಯೋಜನೆಯ ಕಾರ್ಟೋಗ್ರಾಫ್ Error/Mistake ಹಾಗೂ ವಲಯ ನಿಯಮಾವಳಿಯಲ್ಲಿ ಬಿಟ್ಟು ಹೋಗಿರುವ ಅಂಶಗಳನ್ನು ಅಂತಿಮ ಮಹಾಯೋಜನೆ ಹಾಗೂ ವಲಯ ನಿಯಮಾವಳಿಯಲ್ಲಿ ಸರಿಪಡಿಸಿ ಅಳಡಿಸಿಕೊಳ್ಳುವುದು ಸೂಕ್ತವಾಗಿದ್ದು ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

**<u>ನಿರ್ಣಯ:</u>** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಟಿಪ್ಪಣಿಯಲ್ಲಿ ಪರಿಷ್ಕರಣೆಗೆ ಕೋರಿರುವ ಅಂಶಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಅನುಮೋದಿತ ಮಹಾಯೋಜನೆ ನಕ್ಷೆ ಹಾಗೂ ಗ್ರಾಮ ನಕ್ಷೆಗಳನ್ನು ಸಭೆಯು ಪರಿಶೀಲಿಸಿತು. ಟಿಪ್ಪಣಿಯಲ್ಲಿ ನಮೂದಿಸಿರುವ ಅಂಶಗಳಾದ ಕೆರೆ, ರಸ್ತೆ ಅಗಲ, ರಸ್ತೆ ಪಂಕ್ತೀಕರಣ, Drain ಇತ್ಯಾದಿ ಹಾಗೂ ಇನ್ನಿತರೇ ಯಾವುದಾದರು ಕಾರ್ಟೋಗ್ರಾಫ್ Error/Mistake ಗಳು ನಕ್ಷೆಯಲ್ಲಿ ಕಂಡುಬಂದಲ್ಲಿ ಹಾಗೂ ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿರುವ ನಗರೀಕರಣದ ಎಲ್ಲೆಯನ್ನು ಗ್ರಾಮ ನಕ್ಷೆಯ ಸರ್ವೆ ನಂಬರ್ ಗಡಿಯೊಂದಿಗೆ ಪರಿಶೀಲಿಸಿ ಯೋಜನಾ ದೃಷ್ಟಿಯಿಂದ ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಸರಿಪಡಿಸಿ ಅಳವಡಿಸಿಕೊಳ್ಳುವಂತೆ ಹಾಗೂ ವಲಯ ನಿಯಮಾವಳಿಯಲ್ಲಿ ನಿವೇಶನ ಒಂದುಗೂಡಿಸುವಿಕೆ/ವಿಭಜನೆಗೆ ನಿಯಮಾವಳಿಗಳನ್ನು ಹಾಗೂ ಇನ್ನಿತರೇ ಯಾವುದಾದರೂ ನಿಯಮಾವಳಿಗಳು ತಾತ್ಕಾಲಿಕ ವಲಯ ನಿಯಮಾವಳಿಯಲ್ಲಿ ಅಳವಡಿಸಿಕೊಳ್ಳಲು ಬಿಟ್ಟುಹೋಗಿರುವುದು ಕಂಡುಬಂದಿದ್ದಲ್ಲಿ ಹಾಗೂ ಅಳವಡಿಸಿರುವ ನಿಯಮಾವಳಿಯಲ್ಲಿ ಸೂಕ್ತವಾದ ಮಾರ್ಪಾಡುಗಳನ್ನು ಯೋಜನಾ ದೃಷ್ಟಿಯಿಂದ ವಲಯ ನಿಯಮಾವಳಿಯಲ್ಲಿ ಮಾಡಿಕೊಂಡು ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**<u>ವಿಷಯ ಸಂಖ್ಯೆ: 05</u>** – ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿ ಸ.ನಂ. 80 ಮತ್ತು 80/1 ರಲ್ಲಿ ಅಳಡಿಸಿರುವ ಭೂ–ಉಪಯೋಗಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಆಕ್ಷೇಪಣೆಯನ್ನು ಪುನರ್ ಪರಿಶೀಲಿಸುವ ಬಗ್ಗೆ.

**<u>ಟಿಪ್ಪಣಿ:</u>** ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಎಂ.ಕೆ. ಧನರಾಜ್, ಸುಶೀಲ ಹೆಚ್.ಪಿ. ಎಂ.ಎನ್. ಭೋಗಪ್ಪ ಮತ್ತು ಮಕ್ಕಳು ಹೇಮಂತ್ ಕುಮಾರ್ ಇವರುಗಳು ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಅನುಮೋದನೆಗೊಂಡಿರುವ ತಾತ್ಕಾಲಿಕ ಮಹಾಯೋಜನೆಯಲ್ಲಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸ.ನಂ. 80 ಮತ್ತು 81 ಜಾಗವನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವ ಬಗ್ಗೆ ದಿನಾಂಕ: 03–02–2015 (ಆಕ್ಷೇಪಣೆ ಸಲ್ಲಿಸಲು ನಿಗಧಿಪಡಿಸಿದ ದಿನದೊಳಗೆ) ರಂದು ಆಕ್ಷೇಪಣೆ ಸಲ್ಲಿಸಿದ್ದು ಈ ಬಗ್ಗೆ ದಿನಾಂಕ: 18–05–2017 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಕ್ರಮ ಸಂಖ್ಯೆ 7 ರಲ್ಲಿ ಸದರಿ ವಿಷಯವನ್ನು ಚರ್ಚಿಸಲಾಗಿದ್ದು, ಪರಿಶೀಲಿಸಲಾಗಿ ಪರಿಷ್ಕರಣೆಗೆ ನೀಡಿರುವ ಕಾರಣಗಳಲ್ಲಿ ಸದರಿ ಜಮೀನು ಅರ್ಜಿದಾರರ ಸ್ವಾಧೀನದಲ್ಲಿದ್ದು, ಆರ್.ಟಿ.ಸಿ ಮತ್ತು ಎಂ.ಸಿ ಅರ್ಜಿದಾರರ ಹೆಸರಿನಲ್ಲಿರುವುದರಿಂದ ಅರ್ಧ ಭಾಗವನ್ನು ವಾಣಿಜ್ಯ ಮತ್ತು ಅರ್ಧ ಭಾಗವನ್ನು ವಸತಿಗೆ ಬದಲಾಯಿಸಬೇಕೆಂದು ಮನವಿ ನೀಡಿದ್ದು, ಹಿಂದಿನ ಸದಸ್ಯ ಕಾರ್ಯದರ್ಶಿಯವರು ತಮ್ಮ ಅಭಿಪ್ರಾಯದಲ್ಲಿ ಸ್ಥಳವು ಹಾಲಿ ಪೋಲೀಸ್ ಇಲಾಖೆಯ ಸ್ವಾಧೀನದಲ್ಲಿ ಇರುತ್ತದೆ ಆದ್ದರಿಂದ ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂಬುದಾಗಿ ಅಭಿಪ್ರಾಯ ದಾಖಲಿಸಿರುತ್ತಾರೆ. ಈ ಬಗ್ಗೆ ಚರ್ಚಿಸಿರುವ ಸಭೆಯು ದಾಖಲಾತಿಗಳನ್ನು ಪರಿಶೀಲಿಸಿ ಮರುಪರಿಶೀಲನೆಗೆ ನಿರ್ಧರಿಸಿ ನಿರ್ಣಯಿಸಿರುವುದರಿಂದ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

**<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u>** ಟಿಪ್ಪಣಿಯಲ್ಲಿ ವಿವರಿಸಿದಂತೆ, ಪರಿಶೀಲಿಸಲಾಗಿ ತಾತ್ಕಾಲಿಕ ಅನುಮೋದಿತ ಮಹಾಯೋಜನೆಯಲ್ಲಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮುಳ್ಳುಸೋಗೆ ಗ್ರಾಮ ಸ.ನಂ. 80 ಮತ್ತು 81 ರ ಭಾಗಶ: ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉದ್ದೇಶಕ್ಕೆ ಹಾಗೂ ಭಾಗಶ: ವಸತಿ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ. ಆಕ್ಷೇಪಣೆದಾರರು ಸಲ್ಲಿಸಿರುವ ಆರ್.ಟಿ.ಸಿ ಹಾಗೂ ಸರ್ವೆ ನಕ್ಷೆ ಪರಿಶೀಲಿಸಲಾಗಿ ಆಕ್ಷೇಪಣೆದಾರರ ಹೆಸರಿನಲ್ಲಿ ಆರ್.ಟಿ.ಸಿ ಇರುವುದು ಕಂಡುಬಂದಿದೆ ಹಾಗೂ ಸದರಿ ಜಮೀನುಗಳು ತಾತ್ಕಾಲಿಕ ಮಹಾಯೋಜನೆಯಲ್ಲಿ ಸಾರ್ವಜನಿಕ ಮತ್ತು ಅರೆಸಾರ್ವಜನಿಕ (Police Parade Ground) ಉದ್ದೇಶದಲ್ಲಿ ಇರುವುದು ಕಂಡುಬಂದಿದೆ. ಹಾಗಾಗಿ ಸದರಿ ಜಮೀನುಗಳು ಪೋಲೀಸ್ ಇಲಾಖೆಗೆ ಸಂಬಂಧಿಸಿದಲ್ಲಿ ಈ ಬಗ್ಗೆ ದಾಖಲೆಗಳನ್ನು ನೀಡುವಂತೆ ಕೋರಿ ಪೋಲೀಸ್ ಇಲಾಖೆಗೆ ಪತ್ರ ಬರೆಯಲಾಗಿದ್ದು, ಸದರಿ ಪತ್ರವನ್ನು ಕಛೇರಿಯ ಸಿಬ್ಬಂದಿಯೊಂದಿಗೆ ಮುದ್ದಾಂ ರವಾನಿಸಲಾಗಿ ಠಾಣೆಯಲ್ಲಿ ಪತ್ರವನ್ನು ಪರಿಶೀಲಿಸಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಇರುವುದರಿಂದ ಈ ಕಛೇರಿಯ ಪತ್ರವನ್ನು ಸ್ವೀಕರಿಸಲು ಸಾಧ್ಯವಿರುವುದಿಲ್ಲ ಎಂಬುದಾಗಿ ಪೋಲೀಸ್ ಠಾಣೆಯಲ್ಲಿ ಮೌಖಿಕವಾಗಿ ತಿಳಿಸಿ ಪತ್ರವನ್ನು ವಾಪಾಸ್ಸು ನೀಡಿರುತ್ತಾರೆ ಎಂಬುದಾಗಿ ಕಛೇರಿಯ ಸಿಬ್ಬಂದಿ ತಿಳಿಸಿರುತ್ತಾರೆ. ಆದರೆ ಆಕ್ಷೇಪಣೆ ಬಗ್ಗೆ ಪ್ರಾಧಿಕಾರದಿಂದ ತೀರ್ಮಾನ ತೆಗೆದುಕೊಂಡು ಮಹಾಯೋಜನೆ (ಅಂತಿಮ) ನಕ್ಷೆಯನ್ನು ಸಿದ್ಧಪಡಿಸಿ ಜರೂರಾಗಿ ಸರ್ಕಾರಕ್ಕೆ ಶೀಘ್ರವಾಗಿ ಸಲ್ಲಿಸಬೇಕಿರುವುದರಿಂದ ಪತ್ರ ತಲುಪಿದ ತಕ್ಷಣ ದಾಖಲೆಯನ್ನು ಈ ಕಛೇರಿಗೆ ನೀಡುವಂತೆ ಮತ್ತೊಮ್ಮೆ ಪತ್ರ ಬರೆದು, ಸದರಿ ಪತ್ರವನ್ನು Speed post ಮುಖಾಂತರ ಕುಶಾಲನಗರ ಪೋಲೀಸ್ ಠಾಣೆಗೆ ರವಾನಿಸಲಾಗಿದ್ದು, ಈವರೆಗೆ ಯಾವುದೇ ಪ್ರತಿಕ್ರಿಯೆ ಸದರಿ ಇಲಾಖೆಯಿಂದ ಬಂದಿರುವುದಿಲ್ಲ. ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಲಾಗಿದೆ.

**<u>ನಿರ್ಣಯ:</u>** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಅರ್ಜಿದಾರರು ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸ.ನಂ. 80 ಮತ್ತು 80/1, 81 ರ ಭೂ–ಉಪಯೋಗಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಆಕ್ಷೇಪಣೆಯನ್ನು ಸಭೆಯು ಪರಿಶೀಲಿಸಿತು. ಜಮೀನು ಈಗಾಗಲೇ Police Parade Ground ಆಗಿ ಉಪಯೋಗಿಸುತ್ತಿರುವುದಾಗಿ ಹಾಗೂ ಈಗಾಗಲೇ ಸದರಿ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ಪೋಲೀಸ್ ಇಲಾಖೆ ಹಾಗೂ ಆಕ್ಷೇಪಣೆದಾರರ ಮಧ್ಯೆ ವ್ಯಾಜ್ಯ ಇರುವುದಾಗಿ ಸದಸ್ಯರುಗಳು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಸುದೀರ್ಘವಾದ ಚರ್ಚೆ ನಡೆದು ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸ.ನ. 80, 80/1, ಮತ್ತು 81 ಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಮಹಾಯೋಜನೆಯಲ್ಲಿ ಅಳವಡಿಸಿರುವ ಭೂ–ಉಪಯೋಗವನ್ನು ಅಂತಿಮ ಮಹಾಯೋಜನೆಯಲ್ಲಿ ಮುಂದುವರೆಸುವುದೆಂದು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**<u>ವಿಷಯ ಸಂಖ್ಯೆ: 06</u>** – ಕುಶಾಲನಗರ ಯೋಜನಾ ಪ್ರಾಧಿಕಾರದ ಮಹಾಯೋಜನೆ(ಅಂತಿಮ) ಯನ್ನು ಸಿದ್ಧಪಡಿಸುತ್ತಿರುವ ಮೆ॥ ಒನ್‌ನೆಸ್ ಇನ್‌ಫ್ರಾಟೆಕ್, ಬೆಂಗಳೂರು ಸಂಸ್ಥೆಗೆ ಮೊದಲನೇ ಹಂತದ ಬಾಬ್ತು ರೂ. 97,940=00 ಗಳನ್ನು ಮುಂಗಡವಾಗಿ ನೀಡುವ ಬಗ್ಗೆ.

**<u>ಟಿಪ್ಪಣಿ:</u>** ವಿಷಯಕ್ಕೆ ಸಂಬಂಧಿಸಿದಂತೆ, ಒನ್‌ನೆಸ್ ಇನ್‌ಫ್ರಾಟೆಕ್, ಬೆಂಗಳೂರು ಇವರು ದಿನಾಂಕ: 19–11–2021 ರಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದ ಮಹಾಯೋಜನೆ(ಅಂತಿಮ) ಯನ್ನು ಸಿದ್ಧಪಡಿಸುತ್ತಿರುವ ಮೊಬಲಗು ರೂ. 2,50,000=00 ಗಳ ಪೈಕಿ ಮೊದಲನೇ ಮುಂಗಡವಾಗಿ ರೂ. 97,940=00 ಗಳನ್ನು ನೀಡಬೇಕೆಂದು ಹಾಗೂ ಮಹಾಯೋಜನೆ (ಅಂತಿಮ) ನಕ್ಷೆ ಮತ್ತು ವರದಿಯನ್ನು ತಯಾರಿಸಿ ಪರಿಶೀಲನೆಗಾಗಿ ಸಲ್ಲಿಸುತ್ತಿದ್ದೇವೆ ಎಂದು ಪತ್ರವನ್ನು ನೀಡಿರುತ್ತಾರೆ. ಸದರಿ ಸಂಸ್ಥೆಗೆ ಮಹಾಯೋಜನೆ (ಅಂತಿಮ) ನಕ್ಷೆ ಸಂಬಂಧ ಮೊದಲನೇ ಮುಂಗಡವಾಗಿ ರೂ. 97,940=00 ಗಳನ್ನು ಪಾವತಿಸಲು ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿದಂತೆ ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಮಹಾಯೋಜನೆ ತಾತ್ಕಾಲಿಕ ಅನುಮೋದನೆಗೊಂಡಿದ್ದು, ಅಂತಿಮ ಮಹಾಯೋಜನೆಯನ್ನು ಸಿದ್ಧಪಡಿಸುವ ಕೆಲಸವು ಅಂತಿಮ ಹಂತದಲ್ಲಿದೆ. ಮಹಾಯೋಜನೆ ಅಂತಿಮ ಸಿದ್ಧಪಡಿಸುವ ಸಂಬಂಧ ದಿನಾಂಕ: 23–01–2018 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆ ವಿಷಯ ಸಂಖ್ಯೆ (2) ರಲ್ಲಿ ಚರ್ಚಿಸಲಾಗಿದ್ದು, ಸದರಿ ಸಭೆಯಲ್ಲಿ ಮಹಾಯೋಜನೆ (ಅಂತಿಮ) ಸಿದ್ಧಪಡಿಸುವ ಕೆಲಸವನ್ನು ಈಗಾಗಲೇ ಮೇ॥ ಒನ್‌ನೆಸ್ ಸಂಸ್ಥೆಯವರು ಮೌಖಿಕ ಸೂಚನೆ ಮೇರೆಗೆ 80% ರಷ್ಟು ಪೂರೈಸಿರುವುದನ್ನು ಸದರಿ ಸಭೆಯು ಸ್ಥಿರೀಕರಿಸಿದ್ದು ಮಹಾಯೋಜನೆ (ಅಂತಿಮ) ನಕ್ಷೆ ಮತ್ತು ವರದಿಯನ್ನು ಸಿದ್ಧಪಡಿಸುವ ಕೆಲಸವನ್ನು ಅದೇ ಸಂಸ್ಥೆಗೆ ರೂ. 2,50,000/– ಗಳಿಗೆ ವಹಿಸಲು ಸರ್ವಾನುಮತ ನಿರ್ಣಯಿಸಿರುವುದು ಕಂಡುಬಂದಿದೆ. ಸದರಿ ಮಹಾಯೋಜನೆ (ಅಂತಿಮ) ನಕ್ಷೆ ಹಾಗೂ ವರದಿಯನ್ನು ಮೂರು ಹಂತಗಳಲ್ಲಿ ಸಿದ್ಧಪಡಿಸಲು ರೂ. 2,50,000/– ಗಳಾಗುತ್ತದೆ ಎಂಬುದಾಗಿ ದಿನಾಂಕ: 26–09–2017 ಮತ್ತು 23–01–2018 ರಂದು ನಡೆದ ದೂರವಾಣಿ ಚರ್ಚೆಯಲ್ಲಿ ಮೌಖಿಕವಾಗಿ ತಿಳಿಸಲಾಗಿದ್ದು ಈ ಬಗ್ಗೆ ದಿನಾಂಕ: 23–01–2018 ರಂದು ನಡೆದ ಸಭೆಯಲ್ಲಿ ಮಹಾಯೋಜನೆ (ಅಂತಿಮ) ನಕ್ಷೆಯಲ್ಲಿ ವರದಿ ತಯಾರಿಸಲು ರೂ. 2,50,000/– ಗಳಿಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿ ಸದರಿ ಕೆಲಸವನ್ನು ಪೂರ್ಣಗೊಳಿಸಲು ಮೇ॥ ಒನ್‌ನೆಸ್ ಸಂಸ್ಥೆಗೆ ಮೌಖಿಕವಾಗಿ ಹಿಂದಿನ ಸದಸ್ಯ ಕಾರ್ಯದರ್ಶಿಗಳು ತಿಳಿಸಿದನ್ವಯ ನಕ್ಷೆ ಹಾಗೂ ವರದಿಯನ್ನು ಸಿದ್ಧಪಡಿಸಿ ಪರಿಶೀಲನೆಗೆ ಸಲ್ಲಿಸಲಾಗಿರುವುದಾಗಿ ಮೇ॥ ಒನ್‌ನೆಸ್ ಸಂಸ್ಥೆ ಇವರು ಪತ್ರದ ಮುಖೇನ ತಿಳಿಸಿದ್ದು, ನಕ್ಷೆಯನ್ನು ಈಗಾಗಲೇ ಮಾನ್ಯ ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ವಿಭಾಗೀಯ ಕಛೇರಿ, ಮೈಸೂರು ಹಾಗೂ ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಪರಿಶೀಲನೆಗೆ ಒಳಪಡಿಸಲಾಗಿದ್ದು, ಸದರಿಯವರು ಸೂಚಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವ ಕೆಲಸ ನಡೆಯುತ್ತಿರುತ್ತದೆ ಹಾಗಾಗಿ ಮಹಾಯೋಜನೆ ನಕ್ಷೆ ಹಾಗೂ ವರದಿ ಸಿದ್ಧಪಡಿಸುವ ಕೆಲಸವು ಶೇಕಡಾ 90 ರಷ್ಟು ಮುಗಿದಿರುವುದರಿಂದ, ಮಹಾಯೋಜನೆ ನಕ್ಷೆ ಸಿದ್ಧಪಡಿಸಲು ಸದರಿ ಸಂಸ್ಥೆಗೆ ವಹಿಸಿರುವ ರೂ. 2,50,000/– ಮೊತ್ತದ ಪೈಕಿ ಮೊದಲನೇ ಹಂತದ ಭಾಗವಾಗಿ ರೂ. 97,940/– ಗಳನ್ನು ಮುಂಗಡವಾಗಿ ನೀಡಲು ಕೋರಿರುವುದಾಗಿದ್ದು, ಮಹಾಯೋಜನೆ ತಾತ್ಕಾಲಿಕ ಸಿದ್ಧಪಡಿಸುವ ಕೆಲಸವನ್ನು ಇದೇ ಸಂಸ್ಥೆಯು ಪೂರೈಸಿದ್ದು, ಪ್ರಸ್ತುತ ಅಂತಿಮ ಮಹಾಯೋಜನೆಯನ್ನು ಇದೇ ಸಂಸ್ಥೆಯಿಂದ ಸಿದ್ಧಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಇರುವುದರಿಂದ ಈ ಹಿಂದಿನ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಮತ್ತು Karnataka Transparency in public procurement act 1999 ಕಲಂ 4(c) ಮತ್ತು e (ii) ರಂತೆ ಮೊತ್ತವು ಮಿತಿಯಲ್ಲಿರುವುದರಿಂದ ಸದರಿ ಸಂಸ್ಥೆಗೆ ರೂ. 97,940/– ಗಳನ್ನು ಪಾವತಿಸಬಹುದಾಗಿದ್ದು ವಿಷಯವನ್ನು ಸಭೆಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಕೂಲಂಕುಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು, ಈ ಹಿಂದಿನ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಮಹಾಯೋಜನೆ ತಾತ್ಕಾಲಿಕ ಸಿದ್ಧಪಡಿಸಿರುವ ಒನ್‌ನೆಸ್ ಇನ್‌ಫ್ರಾಟೆಕ್ ಬೆಂಗಳೂರು ಸಂಸ್ಥೆಯಿಂದಲೇ ಮಹಾಯೋಜನೆ ಅಂತಿಮ ಸಿದ್ಧಪಡಿಸಿಕೊಳ್ಳುವ ಅನಿವಾರ್ಯತೆ ಇರುವ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ಸಭೆಗೆ ವಿವರಿಸಿದರು. ಕೂಲಂಕುಷವಾಗಿ ಚರ್ಚಿಸಿದ ಸಭೆಯು ಮಹಾಯೋಜನೆ ಅಂತಿಮ ಕೆಲಸವನ್ನು ಮೂರು ಹಂತಗಳಲ್ಲಿ ಪೂರೈಸುವ ಬಗ್ಗೆ ಹಿಂದಿನ ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾವಿಸಿರುವುದರಿಂದ ಹಾಗೂ ಅಂತಿಮ ಮಹಾಯೋಜನೆಯನ್ನು ಇದೇ ಸಂಸ್ಥೆಯಿಂದ ಸಿದ್ಧಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಇರುವುದರಿಂದ ಹಿಂದಿನ ಪ್ರಾಧಿಕಾರದ ಸಭೆಯ ನಿರ್ಣಯ ಹಾಗೂ ಮೌಖಿಕ ಆದೇಶದ ಮೇರೆಗೆ ಒನ್‌ನೆಸ್ ಇನ್‌ಫ್ರಾಟೆಕ್ ಬೆಂಗಳೂರು ಇವರು ಮಹಾಯೋಜನೆ ಅಂತಿಮ ಸಿದ್ಧಪಡಿಸುವ ಶೇಕಡಾ 90 ರಷ್ಟು ಕೆಲಸ ಪೂರೈಸಿ ಈಗಾಗಲೇ ವರದಿ ಹಾಗೂ ನಕ್ಷೆಯನ್ನು ಪರಿಶೀಲನೆಗೆ ಒಳಪಡಿಸಲು ಸಲ್ಲಿಸಿರುವುದರಿಂದ ಮತ್ತು Karnataka Transparency in public procurement act 1999

ಕಲಂ 4(c) ಮತ್ತು e (ii) ರಂತೆ ಮೊತ್ತವು ಮಿತಿಯಲ್ಲಿರುವುದರಿಂದ ಮೇ॥ ಒನ್‌ನೆಸ್ ಇನ್‌ಫ್ರಾಟೆಕ್, ಬೆಂಗಳೂರು ಸಂಸ್ಥೆಗೆ ಮೊದಲನೆ ಹಂತವಾಗಿ ರೂಪಾಯಿ 97,940/– ಪಾವತಿಸುವಂತೆ ಸರ್ವಾನುಮತದಿಂದ ನಿರ್ಣಯಿಸಿ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿತು.

**ವಿಷಯ ಸಂಖ್ಯೆ: 07** – ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಪಟ್ಟಣ ಪಂಚಾಯಿತಿಯಿಂದ ಒಬ್ಬ ಚುನಾಯಿತ ಸದಸ್ಯರನ್ನು ನೇಮಿಸಿರುವ ಬಗ್ಗೆ.

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಪತ್ರ ಸಂ: ನಅಇ 149 ಮೈಅಪ್ರಾ 2008 ಬೆಂಗಳೂರು ದಿನಾಂಕ: 24–02–2009 ರಲ್ಲಿ ಕುಶಾಲನಗರ ಯೋಜನಾ ಪ್ರದೇಶಕ್ಕೆ ಅಧ್ಯಕ್ಷರು ಹಾಗೂ ಸದಸ್ಯರು ಒಳಗೊಂಡಂತೆ ಯೋಜನಾ ಪ್ರಾಧಿಕಾರವನ್ನು ರಚಿಸಿ ಆದೇಶಿಸಿದ್ದು, ಸದರಿ ಆದೇಶದಲ್ಲಿ ಸ್ಥಳೀಯ ಸಂಸ್ಥೆ ಪ್ರತಿನಿಧಿಗಳು: ಕುಶಾಲನಗರ ಪುರಸಭೆಯ ಚುನಾಯಿತ ಸದಸ್ಯರೊಬ್ಬರನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ದಿನಾಂಕ: 09–11–2021 ರ ಪತ್ರದಲ್ಲಿ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಕುಶಾಲನಗರ ಇವರು ಪಟ್ಟಣ ಪಂಚಾಯಿತಿಯ ಚುನಾಯಿತ ಸದಸ್ಯರಾದ ಶ್ರೀ ಬಿ. ಅಮೃತರಾಜ್ ಇವರನ್ನು ಪಟ್ಟಣ ಪಂಚಾಯಿತಿ ಕೌನ್ಸಿಲ್ ತೀರ್ಮಾನದಂತೆ ಯೋಜನಾ ಪ್ರಾಧಿಕಾರಕ್ಕೆ ನೇಮಿಸಿರುವುದಾಗಿ ಪತ್ರ ಬರೆದು ಕೌನ್ಸಿಲ್ ಸಭೆಯ ನಿರ್ಣಯದ ಪ್ರತಿಯನ್ನು ಸಲ್ಲಿಸಿರುತ್ತಾರೆ. ವಿಷಯವನ್ನು ಸಭೆಗೆ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಅಧಿಸೂಚನೆ ಪತ್ರ ಸಂ: ನಅಇ 149 ಮೈಅಪ್ರಾ 2008 ಬೆಂಗಳೂರು ದಿನಾಂಕ: 24–02–2009 ರಲ್ಲಿ ಸ್ಥಳೀಯ ಸಂಸ್ಥೆ ಚುನಾಯಿತ ಸದಸ್ಯರೊಬ್ಬರನ್ನು ಪ್ರತಿನಿಧಿಯಾಗಿ ಯೋಜನಾ ಪ್ರಾಧಿಕಾರಕ್ಕೆ ನೇಮಿಸಲು ಅವಕಾಶ ಕಲ್ಪಿಸಿದ್ದು, ಈ ಬಗ್ಗೆ ಸ್ಥಳೀಯ ಸಂಸ್ಥೆಯ ಕೌನ್ಸಿಲ್ ಸಭೆಯ ನಿರ್ಣಯದಂತೆ ಸದಸ್ಯರನ್ನು ನೇಮಿಸಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಸಲ್ಲಿಸಬಹುದಾಗಿದ್ದು ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಕುಶಾಲನಗರ ಪಟ್ಟಣ ಪಂಚಾಯಿತಿಯಿಂದ ಯೋಜನಾ ಪ್ರಾಧಿಕಾರಕ್ಕೆ ಸ್ಥಳೀಯ ಸಂಸ್ಥೆಯ ಕೌನ್ಸಿಲ್ ಸಭೆಯ ನಿರ್ಣಯದಂತೆ ನೇಮಿಸಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

**ವಿಷಯ ಸಂಖ್ಯೆ: 08** – ಸಭೆಯ ಸ್ಥೀರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆಗಳು:–

1) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 55/2 ರಲ್ಲಿನ 0.10 ಎಕರೆ ವಿಸ್ತೀರ್ಣದ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 11–10–2021 ರಂದು ತಾಂತ್ರಿಕ ಅನುಮೋದನೆ ನೀಡಿದ್ದು, ದಿನಾಂಕ: 17–03–2020ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ (16) ರ ನಿರ್ಣಯದಂತೆ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ. (**ಅರ್ಜಿದಾರರು:– ಶ್ರೀ ಜಿ.ಆರ್. ನಾಗಮಲ್ಲೇಶ್ ಮತ್ತು ಶ್ರೀಮತಿ ಆರ್.ಕೆ. ವೀಣಾ**)

**ಟಿಪ್ಪಣಿ :** ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 55/2 ರಲ್ಲಿನ 0.10 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: ಭೂಪರಿ/179/2017–18. LAND10002301 ದಿನಾಂಕ: 14–02–2020 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದೆ ಹಾಗೂ ಉತ್ತರ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಗೆ ಲಗತ್ತಾಗಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 404.70 ಚ.ಮೀ (ಶೇ. 100.00%) ವಿಸ್ತೀರ್ಣದ ಪ್ರದೇಶವನ್ನು

ನಿಗಧಿಪಡಿಸಿ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ (16) ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥೀರೀಕರಣಕ್ಕಾಗಿ ಮಂಡಿಸಿದೆ.

2) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 32/4 ರಲ್ಲಿನ 0.15 ಎಕರೆ ವಿಸ್ತೀರ್ಣದ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 06–11–2021 ರಂದು ತಾಂತ್ರಿಕ ಅನುಮೋದನೆ ನೀಡಿದ್ದು, ದಿನಾಂಕ: 17–03–2020ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ (16) ರ ನಿರ್ಣಯದಂತೆ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ. (**ಅರ್ಜಿದಾರರು: ಶ್ರೀ ಬಿ.ಆರ್. ರಾಜು ಬಿನ್ ಪೌತಿ ಬಿ. ರಾಮಪ್ಪ**)

**ಟಿಪ್ಪಣಿ :** ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 32/4 ರಲ್ಲಿನ 0.15 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: ಭೂಪರಿ/206/2016–17. ದಿನಾಂಕ: 10–01–2017. ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ನಂತರ ನವೀಕರಣ ಪತ್ರ ಸಂಖ್ಯೆ: LCRE10000487. ದಿನಾಂಕ: 16–04–2021 ರಲ್ಲಿ ಸದರಿ ಜಮೀನಿನ ಭೂ–ಪರಿವರ್ತನಾ ಆದೇಶವನ್ನು ನವೀಕರಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ 6.0ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಗೆ ಲಗತ್ತಾಗಿದ್ದು, ಸದರಿ ರಸ್ತೆಯನ್ನು 9.0ಮೀ ಅಗಲೀಕರಣಕ್ಕೆ ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 540.00 ಚ.ಮೀ (ಶೇ. 90.00%) ಮತ್ತು ರಸ್ತೆ ಅಗಲೀಕರಣಕ್ಕಾಗಿ 60.00 ಚ.ಮೀ (ಶೇ. 10.00%) ವಿಸ್ತೀರ್ಣದ ಪ್ರದೇಶವನ್ನು ನಿಗಧಿಪಡಿಸಿ ವಸತಿ ಉದ್ದೇಶದ ಏಕ–ವಿನ್ಯಾಸ ನಕ್ಷೆಗೆ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥೀರೀಕರಣಕ್ಕಾಗಿ ಮಂಡಿಸಿದೆ.

**ನಿರ್ಣಯ:** ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಕಡತಗಳಿಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಸ್ಥಿರೀಕರಿಸಿತು.

**ವಿಷಯ ಸಂಖ್ಯೆ: 09** – ಕುಶಾಲನಗರ ಪಟ್ಟಣದ ತಾವರೆಕೆರೆ ಸಮೀಪದಲ್ಲಿ ರಾಷ್ಟ್ರೀಯ ಹೆದ್ದಾರಿ ಮೈಸೂರು ರಸ್ತೆಗೆ ಹೊಂದಿಕೊಂಡಂತೆ ಮೇ॥ ಎಸ್.ಎಲ್.ಎನ್ ಪ್ರಾಪರ್ಟಿಸ್ ಇವರು ನಿರ್ಮಿಸುತ್ತಿರುವ Housing /villa layout ಸಂಬಂಧ ಶ್ರೀ ಅಮೃತೇಶ್ ಎನ್.ಪಿ ವಕೀಲರು ಉಚ್ಚ ನ್ಯಾಯಾಲಯ ಬೆಂಗಳೂರು ಇವರು ಆಕ್ಷೇಪಣೆ ವ್ಯಕ್ತಪಡಿಸಿರುವ ಬಗ್ಗೆ.

**ಟಿಪ್ಪಣಿ:** ಶ್ರೀ ಅಮೃತೇಶ್ ಎನ್.ಪಿ ವಕೀಲರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇವರು ಆಕ್ಷೇಪಣೆ ವ್ಯಕ್ತಪಡಿಸಿರುವ ಬಗ್ಗೆ ದಿನಾಂಕ: 18–09–2021 ರಂದು ನಡೆದ 45ನೇ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ (09) ರಲ್ಲಿ ಮಂಡಿಸಲಾಗಿ, ಕೂಲಂಕುಷವಾಗಿ ಚರ್ಚಿಸಿದ ಸಭೆಯು ವಿನ್ಯಾಸ ಆದೇಶದಲ್ಲಿ ಎರಡು ವರ್ಷಗಳಲ್ಲಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವಂತೆ ಷರತ್ತು ವಿಧಿಸಿದ್ದರು, ನಿಗಧಿತ ಅವಧಿಯಲ್ಲಿ ಅಭಿವೃದ್ಧಿಪಡಿಸದೇ ಇತ್ತೀಚೆಗೆ ಕೃತಕವಾಗಿ ಮಣ್ಣು ತುಂಬಿಸುತ್ತಿರುವ ಕಾರಣವೇನು ಎಂಬ ಬಗ್ಗೆ ಜಮೀನಿನ ಮಾಲೀಕರಿಂದ ಹೇಳಿಕೆ ಪಡೆಯಲು ಪತ್ರ ಬರೆಯುವಂತೆ ಹಾಗೂ ಮುಂದಿನ ಸಭೆಗೆ ಭೂ–ಮಾಲಿಕರ ಹೇಳಿಕೆಯೊಂದಿಗೆ ವಿಷಯವನ್ನು ಮಂಡಿಸುವಂತೆ ಸಭೆಯು ಸೂಚಿಸಿ ನಿರ್ಣಯಿಸಿದ್ದು, ಆ ಪ್ರಕಾರ ವಿನ್ಯಾಸ ಅನುಮೋದನೆ ಪಡೆದ ಎರಡು ವರ್ಷದೊಳಗೆ ಜಮೀನಿನ ಮೂಲಮಟ್ಟದಲ್ಲಿ (Original Earth Level) ದಲ್ಲಿ ಅಭಿವೃದ್ಧಿಪಡಿಸದೇ ಹಾಗೂ ಕೃತಕವಾಗಿ ಮಣ್ಣು ತುಂಬಿಸುತ್ತಿರುವ ಬಗ್ಗೆ ಕಾರಣವನ್ನು ಏಳು ದಿನಗಳ ಒಳಗೆ ನೀಡಲು ಜಮೀನಿನ ಮಾಲೀಕರಿಗೆ ಸೂಚಿಸಿ ದಿನಾಂಕ: 05–10–2021 ರಂದು ಪತ್ರ ಬರೆಯಲಾಗಿದೆ.

ಜಮೀನಿನ ಮಾಲೀಕರಾದ ಶ್ರೀ ಎನ್. ವಿಶ್ವನಾಥನ್ ಬಿನ್ ನಾರಾಯಣನ್ ಇವರು ದಿನಾಂಕ: 11–10–2021 ರಂದು ಈ ಕಛೇರಿಗೆ ಪತ್ರ ಬರೆದಿದ್ದು, ಪ್ರಸ್ತಾವಿತ 12.82 ಎಕರೆ ಜಮೀನಿಗೆ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದಿದ್ದು, ಬಡಾವಣೆ ನಿರ್ಮಾಣಗೊಂಡಿರುವ ಸ್ವತ್ತು ನೀರು ನಿಲ್ಲುವ ಜಾಗವಾಗಿರುವುದಿಲ್ಲ ಹಾಗೂ ಸ್ವತ್ತಿನ ಮೂಲ ಸ್ವರೂಪ ಹಳ್ಳ–ಗದ್ದೆ ಕೃಷಿ ಭೂಮಿಯನ್ನು ಖರೀದಿಸಿರುವುದಿಲ್ಲ. ನೇರವಾಗಿ ವಾಣಿಜ್ಯ ಭೂ–ಪರಿವರ್ತನೆ ಹೊಂದಿರುವ ಸ್ವತ್ತನ್ನು ಅಧಿಕೃತವಾಗಿ ಖರೀದಿಸಿರುವುದಾಗಿದೆ. ದಾಖಲೆಗಳನ್ನು ನೋಡದೆ ಆರೋಪ ಮಾಡಿರುವುದು ತಪ್ಪು, ಬಡಾವಣೆ ವಿನ್ಯಾಸ ನಕ್ಷೆ ಅನುಮೋದನೆ ಮುನ್ನ ಅಥವಾ ನಂತರ 2000 ರಿಂದ 5000 ಲಾರಿ ಲೋಡ್ ಮಣ್ಣನ್ನು ಜಾಗಕ್ಕೆ ಸುರಿದಿರುವುದಿಲ್ಲ. ಅಲ್ಲಿರುವ ಮಣ್ಣನ್ನು ಮಾತ್ರ ಲೇಔಟ್ ನಿರ್ಮಾಣಕ್ಕೆ ಪೂರಕವಾಗಿ ಹರಡಿದ್ದು ಬಡಾವಣೆ ನಿರ್ಮಾಣಗೊಂಡಿರುವ ಸ್ವತ್ತು ಮೂಲತ: 24*7 ನೀರು ನಿಲ್ಲುವ ಜಾಗ ಅಂದರೆ ಕೆರೆ ಅಥವಾ ಹೊಳೆಗೆ ಅನ್ವಯಯಿಸಿದ್ದು, ಕೆರೆ ಅಥವಾ ಹೊಳೆ ಜಾಗದಲ್ಲಿ ಬಡಾವಣೆ ನಿರ್ಮಿಸಿರುವುದಿಲ್ಲ. ಸ್ವತ್ತು ವಾಣಿಜ್ಯ ಭೂ–ಪರಿವರ್ತನೆ ಬಡಾವಣೆಯಾಗಿದ್ದು ಇದರಲ್ಲಿ ಹೌಸ್ ವಿಲ್ಲಾ ಲೇಔಟ್ ಪ್ರಶ್ನೆ ಇರುವುದಿಲ್ಲ. ವಾಣಿಜ್ಯ ಬಡಾವಣೆಯಲ್ಲಿ ಮುಂದೆ ಕಟ್ಟುವ ಕಟ್ಟಡವು ಸಂಪೂರ್ಣವಾಗಿ ನುರಿತ ಇಂಜಿನಿಯರ್‌ಗಳ ನಿರ್ದೇಶನದಂತೆ ಪ್ರಶ್ನಾತೀತವಾಗಿ ಎಲ್ಲಾ ಕಾಲಕ್ಕೂ ಮಾದರಿಯಾಗುವಂತೆ ಕಟ್ಟಡವನ್ನು ನಿರ್ಮಿಸುವುದಾಗಿ, ಮೊದಲ ಬಡಾವಣೆ ವಿನ್ಯಾಸ ನಕ್ಷೆಗೆ ಪೂರಕವಾಗಿ ಲೇಔಟ್ ಅಭಿವೃದ್ಧಿಪಡಿಸಿ, ಪರಿಷ್ಕೃತ ವಿನ್ಯಾಸ ನಕ್ಷೆ ಮಂಜೂರಾತಿ ಪಡೆದ ಮೇಲೆ ಈ ಹಿಂದೆ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣದಿಂದ ಆರ್ಥಿಕ ನಷ್ಟ ಅನುಭವಿಸಿದ್ದು ನಂತರ ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ದಿನಾಂಕ: 23–04–2019 ರಂದು ಅನುಮೋದನೆ ಪಡೆದಿದ್ದು, ಎರಡು ವರ್ಷಗಳಿಂದ ಆರ್ಥಿಕ ಮುಗ್ಗಟ್ಟಿನಿಂದ ಲೇಔಟ್ ಅನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿ ವಿವರಣೆ ನೀಡುತ್ತಾ, ಸದರಿ ಲೇಔಟ್‌ನ ಅಭಿವೃದ್ಧಿ ಕಾಮಗಾರಿಗೆ ಮುಂದಿನ ಎರಡು ವರ್ಷಗಳ ಅವಧಿಗೆ ಕಾಲಾವಕಾಶ ವಿಸ್ತರಿಸಿ ಆದೇಶ ನೀಡುವಂತೆ ಪತ್ರದಲ್ಲಿ ಕೋರಿರುತ್ತಾರೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

**<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u>** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಮೀನಿನ ಮಾಲೀಕರಾದ ಶ್ರೀ ಎನ್. ವಿಶ್ವನಾಥನ್ ಇವರು ತಮ್ಮ ಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನು ವಾಣಿಜ್ಯ ಉದ್ದೇಶಕ್ಕೆ ಭೂ–ಪರಿವರ್ತನೆಗೊಂಡಿರುವುದರಿಂದ ಹೌಸ್ ವಿಲ್ಲಾ ಲೇಔಟ್ ಪ್ರಶ್ನೆ ಇರುವುದಿಲ್ಲ ಎಂಬುದಾಗಿ ತಿಳಿಸಿದ್ದು, ವಾಣಿಜ್ಯ ಬಡಾವಣೆಯಲ್ಲಿ ಮುಂದೆ ಕಟ್ಟುವ ಕಟ್ಟಡವು ಸಂಪೂರ್ಣ ನುರಿತ ಇಂಜಿನಿಯರ್‌ಗಳ ನಿರ್ದೇಶನದಂತೆ ಎಲ್ಲಾ ಕಾಲಕ್ಕೂ ಮಾದರಿಯಾಗುವಂತೆ ಕಟ್ಟಡವನ್ನು ನಿರ್ಮಿಸುವುದಾಗಿ ತಿಳಿಸಿದ್ದು, ಸದರಿ ಬಡಾವಣೆಯಲ್ಲಿ ನಿರ್ಮಿಸಲಾಗುವ ಎಲ್ಲಾ ಕಟ್ಟಡಗಳ ಸುರಕ್ಷತೆ ಬಗ್ಗೆ ಕ್ರಮವಹಿಸುವುದು ಅಗತ್ಯವಾಗಿದ್ದು ಜಮೀನಿನ ಮಾಲೀಕರು ತಿಳಿಸಿದಂತೆ ಆಧುನಿಕ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲು ಅವಕಾಶವಿದ್ದರೂ ಸಹ ನಿವೇಶನಗಳನ್ನು ಖರೀದಿಸುವ ಖರೀದಿದಾರರಿಗೆ ನಿವೇಶನದಲ್ಲಿ ಮಣ್ಣು ಸುರಿದಿರುವುದರ ಬಗ್ಗೆ ಅರಿವು ಇಲ್ಲದೇ ಖರೀದಿದಾರರು ಸುರಕ್ಷಿತವಾಗಿ ಕಟ್ಟಡ ನಿರ್ಮಿಸದಿದ್ದಲ್ಲಿ ದೂರುದಾರರ ಆಕ್ಷೇಪಣೆಯಂತೆ ಕಟ್ಟಡಕ್ಕೆ ಹಾನಿ ಆಗುವ ಸಂಭವವಿರುತ್ತದೆ. ಹಾಗಾಗಿ ಮಣ್ಣನ್ನು ಸಂಪೂರ್ಣ ತೆರವುಗೊಳಿಸುವಂತೆ ಜಮೀನಿನ ಮಾಲೀಕರಿಗೆ ಸೂಚಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಗೆ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**<u>ನಿರ್ಣಯ:</u>** ವಿಷಯದ ಬಗ್ಗೆ ಚರ್ಚಿಸಿದ ಸಭೆ ಜಮೀನಿನ ಮಾಲೀಕರಾದ ಶ್ರೀ ಎನ್. ವಿಶ್ವನಾಥನ್ ಬಿನ್ ನಾರಾಯಣನ್ ಇವರು ಕಛೇರಿಗೆ ಸಲ್ಲಿಸಿರುವ ಮಾಹಿತಿ ಪತ್ರವನ್ನು ಸಭೆಯು ಪರಿಶೀಲಿಸಿತು. ವಿಷಯದ ಬಗ್ಗೆ ಕೂಲಂಕುಷವಾಗಿ ಸಭೆಯಲ್ಲಿ ಚರ್ಚೆಯಾಯಿತು. ಸದಸ್ಯ ಕಾರ್ಯದರ್ಶಿಯವರು ಮಾತನಾಡಿ ಜಮೀನಿನಲ್ಲಿ ಸುರಿದಿರುವ ಮಣ್ಣಿನ ಬಗ್ಗೆ ಖರೀದಿದಾರರಿಗೆ ಅರಿವು ಇಲ್ಲದೇ ಖರೀದಿದಾರರು ಸುರಕ್ಷಿತವಾಗಿ ಕಟ್ಟಡ ನಿರ್ಮಿಸದಿದ್ದಲ್ಲಿ ಕಟ್ಟಡಕ್ಕೆ ಹಾನಿ ಆಗುವ ಸಂಭವವಿರುವುದರಿಂದ ಮಣ್ಣನ್ನು ತೆರವುಗೊಳಿಸುವುದು ಸೂಕ್ತ ಎಂಬುದಾಗಿ ಸಭೆಗೆ ತಿಳಿಸಿದರು. ಸದಸ್ಯರಾದ ಶ್ರೀ ಪುಂಡರೀಕಾಕ್ಷರವರು ಮಾತನಾಡಿ ಪ್ರಸ್ತುತ ಆಧುನಿಕ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲು ಅವಕಾಶವಿರುವುದರಿಂದ ಜಮೀನಿನಲ್ಲಿ ಸುರಿದಿರುವ ಮಣ್ಣನ್ನು ತೆರವುಗೊಳಿಸಲು ಸೂಚಿಸುವುದು ಸಮಂಜಸವಲ್ಲ ಎಂಬುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ಇತರೇ ಸದಸ್ಯರು ದನಿಗೂಡಿಸಿದರು. ವಿಷಯದ ಬಗ್ಗೆ

ಸುದೀರ್ಘವಾಗಿ ಚರ್ಚಿಸಿದ ಸಭೆಯು ಪ್ರಸ್ತಾವಿತ ನಿವೇಶನದಲ್ಲಿ ಕಟ್ಟಡ ನಿರ್ಮಿಸುವ ಪೂರ್ವದಲ್ಲಿ ಕಡ್ಡಾಯವಾಗಿ ಮಣ್ಣು ಪರೀಕ್ಷೆ ಮಾಡಿಸಿ Pile Foundation ಕಡ್ಡಾಯವಾಗಿ ಅಳವಡಿಸಿ ಕಟ್ಟಡ ನಿರ್ಮಿಸಿಕೊಳ್ಳುವ ಬಗ್ಗೆ ವಿನ್ಯಾಸದ ಆದೇಶದಲ್ಲಿ ಷರತ್ತು ವಿಧಿಸುವಂತೆ ಹಾಗೂ ಮಣ್ಣು ಪರೀಕ್ಷೆ ಮತ್ತು Pile Foundation ಅಳವಡಿಸಿಕೊಳ್ಳುವ ಬಗ್ಗೆ ಖರೀದಿದಾರರ ಗಮನಕ್ಕೆ ತರುವ ಸಂಬಂಧ ಜಮೀನಿನ ಮಾಲೀಕರಿಗೆ ಜಮೀನಿನಲ್ಲಿ ಸೂಚನಾ ಫಲಕ ಅಳವಡಿಸುವಂತೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ ನಿರ್ಣಯಿಸಿತು.

**<u>ವಿಷಯ ಸಂಖ್ಯೆ: 10</u>** – ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 43/1 ಮತ್ತು 43/2 ರಲ್ಲಿನ 12.53 ಎಕರೆ ಪೈಕಿ 5.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ. (**ಅರ್ಜಿದಾರರು: ಶ್ರೀ ಎಸ್.ಪಿ. ಚಂದ್ರಶೆಟ್ಟಿ ಮತ್ತು ಶ್ರೀ ಎಸ್.ಪಿ. ಸುರೇಶ್**)

**<u>ಟಿಪ್ಪಣಿ:</u>** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ ಜಮೀನಿನ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಕುಶಾಲನಗರ ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಪ್ರಸ್ತಾವಿತ ಜಮೀನನ್ನು ಉಪವಿಭಾಗಾಧಿಕಾರಿ, ಮಡಿಕೇರಿ ಉಪವಿಭಾಗ ಇವರ ಆದೇಶ ಪತ್ರ ಸಂಖ್ಯೆ: ಪರಿ/42/93–94 ದಿನಾಂಕ: 02–02–1994 ರಲ್ಲಿ ಸ.ನಂ. 43/1 ರಲ್ಲಿ 2.00 ಎಕರೆ ಹಾಗೂ ಸ.ನಂ. 43/2 ರಲ್ಲಿ 3.50 ಎಕರೆ ಹೀಗೆ ಒಟ್ಟು 5.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿಯೇತರ ನಿವೇಶನವನ್ನಾಗಿ ಮಾಡಲು ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ತಾತ್ಕಾಲಿಕ ಮಹಾಯೋಜನೆ ನಕ್ಷೆಯಲ್ಲಿ ವಸತಿ ವಲಯದಲ್ಲಿದ್ದು, ಜಮೀನು ಪಶ್ಚಿಮ ದಿಕ್ಕಿನಲ್ಲಿ 9.0ಮೀ, ದಕ್ಷಿಣ ದಿಕ್ಕಿನಲ್ಲಿ 12.0ಮೀ ಮತ್ತು ಪೂರ್ವ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಹೊಂದಿದೆ ಹಾಗೂ ಜಮೀನಿನ ನೈರುತ್ಯ ದಿಕ್ಕಿಗೆ ಗ್ರಾಮ ನಕ್ಷೆಯಲ್ಲಿ ರಸ್ತೆ ಇದ್ದು ಸದರಿ ರಸ್ತೆಯ ಜಾಗವು ಅಭಿವೃದ್ಧಿಗೊಂಡಿರುವುದಿಲ್ಲ ಹಾಗೂ ಸ್ಥಳದಲ್ಲಿ ಸದರಿ ರಸ್ತೆಯು ಸುಮಾರು 10.0 ಮೀಟರ್ ಅಗಲ ಇರುವುದು ಕಂಡುಬಂದಿದೆ. ಅರ್ಜಿದಾರರು ಜಮೀನನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವುದಾಗಿ ಹಾಗೂ ಈ ಬಗ್ಗೆ ಆಕ್ಷೇಪಣೆ ಇಲ್ಲದಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಅರ್ಜಿದಾರರು ಕರಡು ವಿನ್ಯಾಸ ನಕ್ಷೆ ತಯಾರಿಸಿ ಸಲ್ಲಿಸಿದ್ದು, ಕರಡು ವಿನ್ಯಾಸ ನಕ್ಷೆಯನ್ನು ಪರಿಶೀಲಿಸಲಾಗಿ, ಸದರಿ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 12240.72 ಚ.ಮೀ (ಶೇ.54.99%), ಉದ್ಯಾನವನಗಳು ಹಾಗೂ ಆಟದ ಮೈದಾನಕ್ಕಾಗಿ 2263.32 ಚ.ಮೀ (ಶೇ.10.17%), ನಾಗರೀಕ ಸೌಲಭ್ಯಕ್ಕಾಗಿ 1112.45 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 6640.41 ಚ.ಮೀ (ಶೇ.29.84%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಲಾಗಿದೆ. ಸದರಿ ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಕರಡು ವಿನ್ಯಾಸ ನಕ್ಷೆಯನ್ನು ಜಮೀನಿನಲ್ಲಿ ಅಭಿವೃದ್ಧಿಪಡಿಸಲು ಅನುಮೋದನೆ ನೀಡಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u>** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯ–ೋಜನೆಯಲ್ಲಿ ವಸತಿ ವಲಯದಲ್ಲಿದ್ದು ಸ್ಥಳಪರಿಶೀಲಿಸಲಾಗಿ, ಜಮೀನು ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿದೆ. ಅರ್ಜಿದಾರರು ಜಮೀನನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವುದಾಗಿ, ಈ ಬಗ್ಗೆ ಆಕ್ಷೇಪಣೆ ಇಲ್ಲದಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಕರಡು ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 12240.72 ಚ.ಮೀ (ಶೇ.54.99%), ಉದ್ಯಾನವನಗಳು ಹಾಗೂ ಆಟದ ಮೈದಾನಕ್ಕಾಗಿ 2263.32 ಚ.ಮೀ (ಶೇ.10.17%), ನಾಗರೀಕ ಸೌಲಭ್ಯಕ್ಕಾಗಿ 1112.45 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 6640.41 ಚ.ಮೀ (ಶೇ.29.84%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಲಾಗಿದೆ. ಹಾಲಿ ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಜಮೀನಿನಲ್ಲಿ ಅಭಿವೃದ್ಧಿಪಡಿಸಲು ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು ಈ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಸಲುವಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 12240.72 ಚ.ಮೀ (ಶೇ.54.99%), ಉದ್ಯಾನವನಗಳು ಹಾಗೂ ಆಟದ ಮೈದಾನಕ್ಕಾಗಿ 2263.32 ಚ.ಮೀ (ಶೇ.10.17%), ನಾಗರೀಕ ಸೌಲಭ್ಯಕ್ಕಾಗಿ 1112.45 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 6640.41 ಚ.ಮೀ (ಶೇ.29.84%) ಕಾಯ್ದಿರಿಸಿರುವುದನ್ನು ಸಭೆಯು ಪರಿಶೀಲಿಸಿತು. ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದ್ದು, ವಸತಿ ಉದ್ದೇಶಕ್ಕೆ ಭೂ–ಪರಿವರ್ತನೆಗೊಂಡಿರುವುದರಿಂದ ಹಾಗೂ ಜಮೀನು ಸಾರ್ವಜನಿಕ ರಸ್ತೆಗೆ ಲಗತ್ತಾಗಿದ್ದು, ಹಾಲಿ ಬೆಳವಣಿಗೆ ಹೊಂದುತ್ತಿರುವ ಪ್ರದೇಶಕ್ಕೆ ಸಮೀಪವಿರುವುದರಿಂದ ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 17(2) ಮತ್ತು (2ಎ) ರನ್ವಯ ವಿನ್ಯಾಸ ನಕ್ಷೆಗೆ ಕರಡು ಅನುಮೋದನೆ ನೀಡುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

**ವಿಷಯ ಸಂಖ್ಯೆ: 11** – ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 1/1 ರಲ್ಲಿನ 0.95 ಎಕರೆ ವಿಸ್ತೀರ್ಣದ ಜಮೀನಿನ ಅನುಮೋದಿತ ಪರಿಷ್ಕೃತ ಕರಡು ವಸತಿ ವಿನ್ಯಾಸ ನಕ್ಷೆಯ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದರಿಂದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ. **(ಅರ್ಜಿದಾರರು: ಶ್ರೀ ಎಂ.ಕೆ ರವೀಂದ್ರ ಬಿನ್ ಪೌತಿ ಕಾಳಪ್ಪ ಎಂ.ಜಿ)**

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 1/1 ರಲ್ಲಿನ 0.95 ಎಕರೆ ವಿಸ್ತೀರ್ಣದ ಜಮೀನಿನ ಪರಿಷ್ಕೃತ ಕರಡು ವಸತಿ ವಿನ್ಯಾಸ ನಕ್ಷೆಗೆ ಈ ಕಛೇರಿಯಿಂದ ದಿನಾಂಕ: 22–07–2021 ರಂದು ಪ್ರಾಧಿಕಾರ ಸಭೆ ದಿನಾಂಕ: 02–07–2021 ರಲ್ಲಿ ವಿಷಯ ಸಂಖ್ಯೆ (12)ರ ನಿರ್ಣಯದನ್ವಯ ಅನುಮೋದನೆ ನೀಡಲಾಗಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ಸದರಿ ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದರಿಂದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಅರ್ಜಿದಾರರು ಪರಿಷ್ಕೃತ ಕರಡು ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಲೋಕೊಪಯೋಗಿ ಇಲಾಖೆ, ಚೆಸ್ಕಾಂ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ತೋಟಗಾರಿಕೆ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಅಂತಿಮ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 2106.52 ಚ.ಮೀ (ಶೇ. 54.80%), ಉದ್ಯಾನವನ ಮತ್ತು ಆಟದ ಮೈದಾನಕ್ಕಾಗಿ 498.61 ಚ.ಮೀ (12.97%), ನಾಗರೀಕ ಸೌಲಭ್ಯಕ್ಕಾಗಿ 192.33 ಚ.ಮೀ (ಶೇ. 5.00%) ಮತ್ತು ರಸ್ತೆಗಾಗಿ 1046.54 ಚ.ಮೀ (ಶೇ. 27.23%) ವಿಸ್ತೀರ್ಣದ ಪ್ರದೇಶನ್ನು ಕಾಯ್ದಿರಿಸಲಾಗಿದೆ. ಸದರಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡುವ ಸಂಬಂಧ ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಸಂಬಂಧ, ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಅನುಮೋದಿತ ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯಲ್ಲಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಅರ್ಜಿದಾರರು ಅಂತಿಮ ವಿನ್ಯಾಸ ನಕ್ಷೆ ಸಲ್ಲಿಸಿದ್ದು ಪರಿಶೀಲಿಸಲಾಗಿ, ವಸತಿ ಉಪಯೋಗಕ್ಕಾಗಿ 2106.52 ಚ.ಮೀ (ಶೇ. 54.80%), ಉದ್ಯಾನವನಗಳು ಮತ್ತು ಆಟದ ಮೈದಾನಕ್ಕಾಗಿ 498.61 ಚ.ಮೀ (12.97%), ನಾಗರೀಕ ಸೌಲಭ್ಯಕ್ಕಾಗಿ 192.33 ಚ.ಮೀ (ಶೇ. 5.00%) ಮತ್ತು ರಸ್ತೆಗಾಗಿ 1046.54 ಚ.ಮೀ (ಶೇ. 27.23%) ವಿಸ್ತೀರ್ಣದ ಪ್ರದೇಶನ್ನು ಕಾಯ್ದಿರಿಸಲಾಗಿದೆ. ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ನಡೆಸಲಾಗಿ ನಾಗರೀಕ ಸೌಲಭ್ಯಕ್ಕೆ ಹಾಗೂ ಉದ್ಯಾನವನಗಳು ಮತ್ತು ಆಟದ ಮೈದಾನಕ್ಕೆ ಕರಡು ವಿನ್ಯಾಸ ನಕ್ಷೆಯಲ್ಲಿ ಕಾಯ್ದಿರಿಸಿರುವ ಸ್ಥಳ ಗುರುತಿಸಿರುವುದು ವ್ಯತ್ಯಾಸ ಆಗಿರುವುದು ಕಂಡುಬಂದಿರುವುದರಿಂದ

ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿ ಅನುಮೋದಿಸಿಕೊಂಡು ಅಭಿವೃದ್ಧಿಪಡಿಸಿದ ನಂತರ ರಸ್ತೆ, ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಈ ಕಛೇರಿಯಿಂದ ಅನುಮೋದಿಸಿದ್ದ ಕರಡು ವಿನ್ಯಾಸ ನಕ್ಷೆಯಂತೆ ವಿನ್ಯಾಸದಲ್ಲಿ ನಿವೇಶನ ಹಾಗೂ ರಸ್ತೆಗಳನ್ನು ಜಮೀನಿನಲ್ಲಿ ಅಳವಡಿಸಿರುವುದನ್ನು ಸಭೆಯು ಗಮನಿಸಿತು. ಅನುಮೋದಿತ ಕರಡು ವಿನ್ಯಾಸ ನಕ್ಷೆಯಲ್ಲಿ ನಾಗರೀಕ ಸೌಲಭ್ಯ ಹಾಗೂ ಉದ್ಯಾನವನ ಮತ್ತು ಆಟದ ಮೈದಾನದ ಜಾಗವನ್ನು ಜಮೀನಿನ ಮಾಲೀಕರು ಅದಲು ಬದಲಾಗಿ ಗುರುತಿಸಿ ಅಭಿವೃದ್ಧಿಪಡಿಸಿರುವುದು ಕಂಡುಬಂದಿರುವುದರಿಂದ ಅನುಮೋದಿತ ಕರಡು ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ, ವಸತಿ ಉಪಯೋಗಕ್ಕಾಗಿ 2106.52 ಚ.ಮೀ (ಶೇ. 54.80%), ಉದ್ಯಾನವನಗಳು ಮತ್ತು ಆಟದ ಮೈದಾನಕ್ಕಾಗಿ 498.61 ಚ.ಮೀ (12.97%), ನಾಗರೀಕ ಸೌಲಭ್ಯಕ್ಕಾಗಿ 192.33 ಚ.ಮೀ (ಶೇ. 5.00%) ಮತ್ತು ರಸ್ತೆಗಾಗಿ 1046.54 ಚ.ಮೀ (ಶೇ. 27.23%) ವಿಸ್ತೀರ್ಣವನ್ನು ಕಾಯ್ದಿರಿಸಿ ಸಲ್ಲಿಸಿರುವ ನಕ್ಷೆಯನ್ನು ಪರಿಷ್ಕರಿಸಿಕೊಂಡು ಹಾಲಿ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವಂತೆ ಕರಡು ನಕ್ಷೆಗೆ ಅನುಮೋದನೆ ನೀಡಿ ನಂತರ ನಿಯಮಾನುಸಾರ ಉದ್ಯಾನವನ ಮತ್ತು ಆಟದ ಮೈದಾನಕ್ಕೆ ಗುರುತಿಸಿರುವ ನಿವೇಶನವನ್ನು ಗ್ರಾಮಪಂಚಾಯಿತಿಗೆ ಹಾಗೂ ನಾಗರೀಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಪ್ರಸ್ತಾವಿತ ಜಮೀನಿನಲ್ಲಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿರುವುದರಿಂದ ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 17(2–ಬಿ) ರನ್ವಯ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲು ಹಾಗೂ ಶೇಕಡಾ 100 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 12** – ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 42/14 ರಲ್ಲಿನ 0.95 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಯನ್ನು ನವೀಕರಿಸಿ ಕೊಡುವಂತೆ ಕೋರಿರುವ ಬಗ್ಗೆ. **(ಅರ್ಜಿದಾರರು: ಶ್ರೀ ಮಂಜೇಗೌಡ ಬಿನ್ ವೈರ್‌ಮುಡಿ ಗೌಡ)**

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಕುಶಾಲನಗರ ಇವರು ಪ್ರಸ್ತಾವನೆ ಸಲ್ಲಿಸಿ, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 42/14 ರಲ್ಲಿನ 0.95 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ದಿನಾಂಕ: 21–08–2015 ರಂದು ಅನುಮೋದನೆ ನೀಡಿದ್ದು, ಅರ್ಜಿದಾರರು ಆರ್ಥಿಕ ಮುಗ್ಗಟ್ಟಿನಿಂದ ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗದೇ ಇರುವುದರಿಂದ, ಪ್ರಸ್ತುತ ಅರ್ಜಿದಾರರು ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸದರಿ ವಿನ್ಯಾಸ ನಕ್ಷೆಯನ್ನು ನವೀಕರಿಸಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಮುಳ್ಳುಸೋಗೆ ಗ್ರಾಮದ ಸ.ನಂ. 42/14 ರಲ್ಲಿನ 0.95 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಭೂಪರಿ/234/2012–13 ದಿನಾಂಕ: 24–05–2013 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಸದರಿ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಈ ಕಛೇರಿ ಪತ್ರ ಸಂಖ್ಯೆ: ಕುಯೋಪ್ರಾ/ಸಕಾ/ಸೋತಾ/ಮುಳ್ಳುಸೋಗೆ ಗ್ರಾಮ/ವಿ.ಅ/05/2015–16 ದಿನಾಂಕ: 21–08–2015 ರಲ್ಲಿ ಅನುಮೋದನೆ ನೀಡಲಾಗಿದೆ. ಸದರಿ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದ್ದು, ಉತ್ತರ ದಿಕ್ಕಿನಲ್ಲಿರುವ 6.0ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯನ್ನು ಮಹಾಯೋಜನೆಯಲ್ಲಿ ಪ್ರಸ್ತಾವನೆಯಂತೆ 12.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಿ ವಸತಿ ಉದ್ದೇಶಕ್ಕೆ 2114.07 ಚ.ಮೀ (ಶೇ. 54.99%), ಉದ್ಯಾನವನಕ್ಕಾಗಿ 385.25 ಚ.ಮೀ (10.02%), ನಾಗರೀಕ ಸೌಲಭ್ಯಕ್ಕಾಗಿ 117.18 ಚ.ಮೀ (ಶೇ. 3.05%) ಮತ್ತು ರಸ್ತೆಗಾಗಿ 1227.97 ಚ.ಮೀ (ಶೇ. 31.94%) ವಿಸ್ತೀರ್ಣದ ಪ್ರದೇಶನ್ನು ಕಾಯ್ದಿರಿಸಿ ಬಹು–ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಈ ಕಛೇರಿಯಿಂದ ಅನುಮೋದನೆ ನೀಡಲಾಗಿದೆ. ಸದರಿ ವಸತಿ ವಿನ್ಯಾಸ ನಕ್ಷೆಯನ್ನು ನವೀಕರಿಸುವ ಸಂಬಂಧ ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:** ಟಿಪ್ಪಣಿಯಲ್ಲಿ ವಿವರಿಸಿದಂತೆ ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 42/14 ರಲ್ಲಿನ 0.95 ಎಕರೆ ವಿಸ್ತೀರ್ಣದ ಭೂ–ಪರಿವರ್ತಿತ ಜಮೀನಿನ ಬಹು–ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಈ ಕಛೇರಿಯಿಂದ ದಿನಾಂಕ: 21–08–2015 ರಂದು ಅನುಮೋದನೆ ನೀಡಲಾಗಿದೆ. ಪರಿಶೀಲಿಸಲಾಗಿ, ಅನುಮೋದಿತ ವಿನ್ಯಾಸವು ಕರಡು ತಾತ್ಕಾಲಿಕವೇ ಅಥವಾ ಅಂತಿಮವೇ ಎಂಬುದಾಗಿ ಹಿಂದಿನ ಸದಸ್ಯ ಕಾರ್ಯದರ್ಶಿಯವರು ನಮೂದಿಸಿರುವುದಿಲ್ಲ. ಪ್ರಸ್ತಾವಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಜಮೀನಿನಲ್ಲಿ Road formation, ಮಳೆನೀರು ಚರಂಡಿ, ನೀರು ಸರಬರಾಜು ಪೈಪ್‌ಲೈನ್ ಅಳವಡಿಕೆ ಕೆಲಸಗಳನ್ನು ಮುಗಿಸಿರುವುದು ಕಂಡುಬಂದಿದ್ದು, ಉಳಿಕೆ ಕೆಲಸಗಳು ಬಾಕಿ ಇರುತ್ತದೆ. ಈ ಕಛೇರಿಯಿಂದ ದಿನಾಂಕ: 21–08–2015 ರಂದು ಅನುಮೋದಿಸಿದ್ದ ವಿನ್ಯಾಸದ ಅವಧಿಯು ಈಗಾಗಲೇ ಮುಗಿದಿರುವುದರಿಂದ ಪ್ರಸ್ತುತ ವಲಯ ನಿಯಮಾವಳಿಯಂತೆ (ಕರಡು) ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಅನುಮೋದನೆ ನೀಡುವುದು ಸೂಕ್ತವಾಗಿದ್ದು, ಅರ್ಜಿದಾರರು ಕರಡು ವಿನ್ಯಾಸ ನಕ್ಷೆ ಸಲ್ಲಿಸಿದ್ದು ಸದರಿ ವಿನ್ಯಾಸ ನಕ್ಷೆಯಲ್ಲಿ ವಸತಿ ಉದ್ದೇಶಕ್ಕೆ 2006.17 ಚ.ಮೀ (ಶೇ. 52.19%), ಉದ್ಯಾನವನಗಳು ಮತ್ತು ಆಟದ ಮೈದಾನಕ್ಕಾಗಿ 385.25 ಚ.ಮೀ (10.02%), ನಾಗರೀಕ ಸೌಲಭ್ಯಕ್ಕಾಗಿ 192.60 ಚ.ಮೀ (ಶೇ. 5.00%) ಮತ್ತು ರಸ್ತೆಗಾಗಿ 1260.15 ಚ.ಮೀ (ಶೇ. 32.78%) ವಿಸ್ತೀರ್ಣದ ಪ್ರದೇಶನ್ನು ಕಾಯ್ದಿರಿಸಲಾಗಿದ್ದು ಸಲ್ಲಿಸಿರುವ ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಪರಿಷ್ಕೃತ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿ ವಸತಿ ಉದ್ದೇಶಕ್ಕೆ 2006.17 ಚ.ಮೀ (ಶೇ. 52.19%), ಉದ್ಯಾನವನಗಳು ಮತ್ತು ಆಟದ ಮೈದಾನಕ್ಕಾಗಿ 385.25 ಚ.ಮೀ (10.02%), ನಾಗರೀಕ ಸೌಲಭ್ಯಕ್ಕಾಗಿ 192.60 ಚ.ಮೀ (ಶೇ. 5.00%) ಮತ್ತು ರಸ್ತೆಗಾಗಿ 1260.15 ಚ.ಮೀ (ಶೇ. 32.78%) ಕಾಯ್ದಿರಿಸಿರುವುದನ್ನು ಪರಿಶೀಲಿಸಿದ ಸಭೆಯು ಜಮೀನು ವಸತಿ ವಲಯದಲ್ಲಿದ್ದು, ವಸತಿ ಉದ್ದೇಶಕ್ಕೆ ಭೂ–ಪರಿವರ್ತನೆಗೊಂಡಿದ್ದು ಈ ಹಿಂದೆ ವಿನ್ಯಾಸವನ್ನು ಎರಡು ವರ್ಷದೊಳಗೆ ಅಭಿವೃದ್ಧಿಪಡಿಸುವಂತೆ ಷರತ್ತು ವಿಧಿಸಿ ದಿನಾಂಕ: 21–08–2015 ರಂದು ಅನುಮೋದಿಸಲಾಗಿದ್ದು ಅರ್ಜಿದಾರರು ಜಮೀನನ್ನು ಅನುಮೋದಿತ ವಿನ್ಯಾಸ ನಕ್ಷೆಯಂತೆ ಈಗಾಗಲೇ ಭಾಗಶ: ಅಭಿವೃದ್ಧಿಪಡಿಸಿದ್ದು, ಪ್ರಸ್ತುತ ಅನುಮೋದಿತ ವಿನ್ಯಾಸದ ಅವಧಿ ಎರಡು ವರ್ಷಗಳು ಮುಗಿದಿರುವುದರಿಂದ ಪ್ರಸ್ತುತ ಸಲ್ಲಿಸಿರುವ ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಂಡು ಈ ಹಿಂದೆ ನೀಡಿದ್ದ ವಿನ್ಯಾಸ ಅನುಮೋದನೆಯನ್ನು ರದ್ದುಪಡಿಸಿ ಕೆ.ಟಿ.ಸಿ.ಪಿ ಕಾಯ್ದೆ 1961 ಕಲಂ 17(2–ಎ) ರನ್ವಯ ಕರಡು (ಪರಿಷ್ಕೃತ) ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ ಸಂಖ್ಯೆ: 13** – ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, 3ನೇ ಬ್ಲಾಕ್, ರಸೂಲ್ ಬಡಾವಣೆಯಲ್ಲಿ ಮಸೀದಿ ನಿರ್ಮಾಣ ಮಾಡಲು ಕಟ್ಟಡ ಪರವಾನಿಗೆ ಕೋರಿರುವ ಬಗ್ಗೆ. **(ಅರ್ಜಿದಾರರು: ಶ್ರೀ ಅಪ್ರೋಜ್ ಮಹಮ್ಮದ್ ಖಾನ್)**

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಕುಶಾಲನಗರ ಇವರು ಹಿಂದೆ ಈ ಕಛೇರಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದು ಪರಿಶೀಲಿಸಲಾಗಿ, ಕುಶಾಲನಗರ ಪಟ್ಟಣ ಪಂಚಾಯಿತಿ ಬ್ಲಾಕ್ ನಂ. 3, ಸ.ನಂ. 141/1 ರಲ್ಲಿನ ನಿ.ಸಂ. 58 ಮತ್ತು 59 ರಲ್ಲಿ ಮಸೀದಿ ಕಟ್ಟಡ ನಿರ್ಮಿಸುವ ಬಗ್ಗೆ, ತಾತ್ಕಾಲಿಕ ಅನುಮೋದಿತ ಮಹಾಯೋಜನೆಯಲ್ಲಿ ನಿವೇಶನವು ವಸತಿ ವಲಯದಲ್ಲಿ ಇರುವುದರಿಂದ ಮಸೀದಿ ಕಟ್ಟಡ ಕಟ್ಟಲು ಬರುವುದಿಲ್ಲ ಎಂಬುದಾಗಿ ತಿಳಿಸಿ ಕಡತವನ್ನು ಪಟ್ಟಣ ಪಂಚಾಯಿತಿಗೆ ದಿನಾಂಕ: 01–12–2017 ರಲ್ಲಿ ಈಗಾಗಲೇ ಹಿಂದಿರುಗಿಸಲಾಗಿತ್ತು. ತದನಂತರ ಸ.ನಂ. 138 ಮತ್ತು 141 ರ ನಿವೇಶನ ಸಂಖ್ಯೆ 58 ರಲ್ಲಿ ಅಡಕವಾಗಿರುವ 7.07 ಸೆಂಟ್ ಜಾಗದಲ್ಲಿ ಮಸೀದಿ ನಿರ್ಮಾಣಕ್ಕೆ ಶ್ರೀ ಅಪ್ರೋಜ್ ಮಹಮ್ಮದ್ ಖಾನ್ ರವರು ಕಟ್ಟಡ ಪರವಾನಿಗೆ ಕೋರಿದ್ದು, ತಮ್ಮ ಕಛೇರಿಗೆ ಈಗಾಗಲೇ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ. ಈ ಬಗ್ಗೆ ದಿನಾಂಕ: 19–04–2017 ರಂದು ನಡೆದ ಈ ಪಟ್ಟಣ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ಇರುವುದರಿಂದ, 5.00 ಸೆಂಟು ಜಾಗದಲ್ಲಿ ಮಸೀದಿಯನ್ನು ಹಾಗೂ ಇನ್ನೂ 5.00 ಸೆಂಟು ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಿಕೊಂಡು

ಒಟ್ಟು 10.00 ಸೆಂಟು ಜಾಗದಲ್ಲಿ ಮಸೀದಿ ನಿರ್ಮಿಸುವ ಬಗ್ಗೆ ಮರುಪ್ರಸ್ತಾವನೆ ಸಲ್ಲಿಸಲು ತೀರ್ಮಾನ ಕೈಗೊಳ್ಳಲಾಗಿರುತ್ತದೆ ಆದ್ದರಿಂದ ಅರ್ಜಿದಾರರ ಹೆಸರಿನಲ್ಲಿ 10.00 ಸೆಂಟ್ ಜಾಗಕ್ಕೆ ಮರು ಪ್ರಸ್ತಾವನೆಯನ್ನು ಪಡೆದುಕೊಂಡು ಕ್ರಮವಹಿಸುವಂತೆ ಈ ಮೂಲಕ ಕೋರಿದ್ದು, ಪ್ರಸ್ತುತ 7.07 ಸೆಂಟ್‌ಗೆ ನಮೂನೆ–3 ಅನ್ನು ನೀಡಿದ್ದು, ಉಳಿದ 2.00 ಸೆಂಟಿಗೆ ಪ್ರಮಾಣಪತ್ರವನ್ನು ನೀಡಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಕೋರಿ ಕಡತವನ್ನು ನೇರವಾಗಿ (manual ಮುಖಾಂತರ) ಈ ಕಛೇರಿಗೆ ಕಳುಹಿಸಿರುತ್ತಾರೆ. ವಿಷಯವನ್ನು ಸಭೆಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿರುತ್ತಾರೆ.

**<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u>** ಟಿಪ್ಪಣಿಯಲ್ಲಿ ವಿವರಿಸಿದಂತೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ನಿವೇಶನ ಸಂಖ್ಯೆ 58 ರಲ್ಲಿರುವ 0.07.07 ಎಕರೆ ಜಾಗದಲ್ಲಿ ಮಸೀದಿ ನಿರ್ಮಾಣಕ್ಕೆ ಕಟ್ಟಡ ಪರವಾನಿಗೆ ಕೋರಿದ್ದು, ಸದರಿ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವುದರಿಂದ 0.05 ಎಕರೆ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಂಡು ಒಟ್ಟು 0.10 ಎಕರೆ ಜಾಗದಲ್ಲಿ ಮಸೀದಿ ನಿರ್ಮಿಸುವ ಬಗ್ಗೆ ಮರುಪ್ರಸ್ತಾವನೆ ಸಲ್ಲಿಸಲು ತೀರ್ಮಾನವಾಗಿರುವುದಾಗಿ ತಿಳಿಸಿ, ಅರ್ಜಿದಾರರ ಹೆಸರಿನಲ್ಲಿ 0.10 ಎಕರೆ ಜಾಗಕ್ಕೆ ಮರುಪ್ರಸ್ತಾವನೆ ಸಲ್ಲಿಸಿರುವುದು ಹಾಗೂ ಪ್ರಸ್ತುತ 0.0707 ಎಕರೆಗೆ ನಮೂನೆ–3 ನೀಡಿದ್ದು ಉಳಿದಂತೆ 0.02 ಎಕರೆಗೆ ಪ್ರಮಾಣ ಪತ್ರ ನೀಡಿರುತ್ತಾರೆ ಎಂಬುದಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದರೆ ನಿವೇಶನ ಸಂಖ್ಯೆ 57 ಅನ್ನು ವಿಭಜಿಸಿಕೊಂಡು ನಿವೇಶನ ಸಂಖ್ಯೆ. 58 ಕ್ಕೆ ಒಂದುಗೂಡಿಸಿಕೊಂಡಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. 0.0707 ಎಕರೆಗೆ ನಮೂನೆ–3 ನೀಡಿರುವುದಾಗಿ ಉಳಿಕೆ 0.02 ಎಕರೆಗೆ ಪ್ರಮಾಣ ಪತ್ರ ನೀಡಿರುತ್ತಾರೆ ಎಂಬುದಾಗಿ ಪ್ರಸ್ತಾವನೆಯಲ್ಲಿ ವಿವರಿಸಿದ್ದು, ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಟ್ಟಡವನ್ನು ನಿರ್ಮಿಸಲು ಪ್ರಸ್ತಾವಿಸುವ ನಿವೇಶನದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಬೇಕಾಗಿರುತ್ತದೆಯೇ ಹೊರತು ಈ ರೀತಿ ಪ್ರಮಾಣ ಪತ್ರಗಳನ್ನು ಪರಿಗಣಿಸಿ ಬೇರೆ ನಿವೇಶನ (ನಿವೇಶನ ಸಂಖ್ಯೆ 57) ದಲ್ಲಿ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಿಕೊಳ್ಳುವ ಬಗ್ಗೆ ಕಟ್ಟಡ ನಕ್ಷೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಅವಕಾಶವಿರುವುದಿಲ್ಲ. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಪತ್ರ CompNo 20841 DMA 40 KMDS 2017-18 ದಿನಾಂಕ: 13–09–2019 ರನ್ವಯ ದಿನಾಂಕ: 16–09–2019 ರಿಂದ Land and Building plan approval system (LBPAS) ತಂತ್ರಾಂಶದ ಮುಖಾಂತರ ಕಟ್ಟಡ ಪರವಾನಿಗೆಗೆ ಪ್ರಕ್ರಿಯೆಯನ್ನು ನಿರ್ವಹಿಸಲು ಸೂಚಿಸಿದ್ದರು ಸಹ ಕಡತವನ್ನು ನೇರವಾಗಿ (manual ಮುಖಾಂತರ) ಕಳುಹಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲ ಹಾಗೂ ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ನಅಇ 85 ಬಿಎಂಆರ್ 2019 (ಇ–ಆಫೀಸ್) ಬೆಂಗಳೂರು ದಿನಾಂಕ: 04–12–2019 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ತೀರ್ಪು "42 We make it clear that henceforth, the planning/development authorities in the State of Karnataka, including the BDA shall not permit change of land use within the layout formed by the BDA Act or the layout formed by any other authority contrary to the scheme sanctioned by the State Government or the layout plan approved by the competent authority. The BDA or the other planning/development authorities shall not venture to alter the sanctioned scheme/approved layout plan in any manner. The BDA and the other Planning/ development authorities Bruhat-Bangalore city Municipal corporation Bangalore, or any other authorities in the state of Karnataka authorized to Sanction the Plan for construction of the building shall not sanction any plan for constructions contrary to the Sanctioned Scheme/approved layout plan ಎಂಬುದಾಗಿ ಉಲ್ಲೇಖಿಸಿ ನಿರ್ದೇಶನ ನೀಡಿರುವುದರಿಂದ ಪ್ರಸ್ತಾವಿತ ನಿವೇಶನವು ವಸತಿ ಉದ್ದೇಶಕ್ಕೆ ಅನುಮೋದನೆಗೊಂಡಿರುವ ಬಡಾವಣೆಯಲ್ಲಿನ ವಸತಿ ನಿವೇಶನವಾಗಿದ್ದು, ಸದರಿ ಬಡಾವಣೆಯಲ್ಲಿ ವಸತಿ ಉದ್ದೇಶದ ಕಟ್ಟಡ ಹೊರತುಪಡಿಸಿ ಬೇರೆ ಉದ್ದೇಶದ ಕಟ್ಟಡ

**ಪು.ತಿ.ನೋ**

ನಕ್ಷೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗುವುದರಿಂದ ಹಾಗೂ ಮೇಲ್ಕಂಡ ಕಾರಣಗಳಿಂದ ಪ್ರಸ್ತಾವನೆಯನ್ನು ಅನುಮೋದನೆಗೆ ಪರಿಗಣಿಸದೇ ಇರುವುದು ಸೂಕ್ತವಾಗಿದ್ದು ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

**ನಿರ್ಣಯ:** ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಪ್ರಸ್ತಾವಿತ ನಿವೇಶನವು ಮಾನ್ಯ ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು ಇವರಿಂದ ವಸತಿ ಉದ್ದೇಶಕ್ಕೆ ಅನುಮೋದನೆಗೊಂಡಿರುವ ವಿನ್ಯಾಸದಲ್ಲಿನ ನಿವೇಶನವಾಗಿದ್ದು, ವಸತಿ ಉದ್ದೇಶಿತ ನಿವೇಶನದಲ್ಲಿ ವಸತಿ ಉದ್ದೇಶಕ್ಕೆ ಹೊರತುಪಡಿಸಿ ವಸತಿಯೇತರ ಉದ್ದೇಶದ ಕಟ್ಟಡ ನಿರ್ಮಿಸಲು ಅನುಮತಿಸುವುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗುವುದರಿಂದ ಮರುಪ್ರಸ್ತಾವನೆಯನ್ನು ತಿರಸ್ಕರಿಸುವುದು ಸೂಕ್ತ ಎಂಬುದಾಗಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ ನಿರ್ಣಯಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ/– | ಸಹಿ/– |
| ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು |
| ಕುಶಾಲನಗರ ಯೋಜನಾ ಪ್ರಾಧಿಕಾರ | ಕುಶಾಲನಗರ ಯೋಜನಾ ಪ್ರಾಧಿಕಾರ |
| ಕುಶಾಲನಗರ | ಕುಶಾಲನಗರ |